ಉಪನ್ಯಾಸ
ಗ್ರಂಥಮಾಲೆ
೧೩೫

ನೆ

ಹೈದರಾಬಾದ ಕರ್ನಾಟಕ ಹಾಗೂ ಪಂಡಿತ ತಾರಾನಾಥರು

ಡಾ|| ಎಸ್. ಎ. ಪಾಟೀಲ
ಎಂ.ಎ , ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಎಪ್ರಿಲ್, ೧೯೭೭

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೩೫

ಹೈದರಾಬಾದ ಕರ್ನಾಟಕ ಹಾಗೂ ಪಂಡಿತ ತಾರಾನಾಥರು

ಡಾ|| ಎನ್. ಎ. ಪಾಟೀಲ, ಎಂ.ಎ., ಪಿಎಚ್.ಡಿ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಎಪ್ರಿಲ್ ೧೯೭೬

ಪ್ರಕಾಶಕರು:

ಕುಲಸಚಿವರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಎಪ್ರಿಲ್, ೧೯೭೬

ಬೆಲೆ : ೨೫ ಪೈಸೆ

ಮುದ್ರಕರು :

ಶ್ರೀಮತಿ ಶಾಂತಾ ಎಚ್. ಬಳೂಟಗಿ,

ಶಿವಾನಂದ ವರ್ಕ್ಸ್, ಜವಳಿಪೇಟ,

ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವ ವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವ ವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾ ಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿ ಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡು ತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶ ವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸ ಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂಥ ವಿಷಯುವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೨೩೪ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೭-೬-೧೯೭೬

ಆರ್. ಸಿ. ಹಿರೇಮಠ
ಕುಲಪತಿಗಳು

ನನ್ನ ಮಾತು

ಯಾವದೇ ದೇಶದ-ಅದೇಕೆ, ಇಡೀ ಪ್ರಪಂಚದ-ಯಾವದೇ ಕಾಲದ ಚರಿತ್ರೆಯನ್ನವಲೋಕಿಸಿದರೂ ಸಹ ಆಯಾ ಪರಿಸ್ಥಿತಿಯ ಪರಿಸರದ ಜಾಯಮಾನದ "ಬೇಡ" ಗಳನ್ನು ನಿವಾರಿಸಲಿಕ್ಕೂ "ಬೇಕು"ಗಳನ್ನು ಪೂರೈಸಲಿಕ್ಕೂ ಅವಶ್ಯವಾದ ಘಟನೆಗಳುಂಟಾಗುವದೂ, ಮಹಾವಿಭೂತಿ ಪುರುಷರು ಉದಯವಾಗುವದೂ, ಚಾಚೂ ತಪ್ಪದಂತೆ ನಡೆಯುತ್ತಿರುವದೂ ನಿದರ್ಶನಕ್ಕೆ ಬಂದೇಬರುತ್ತದೆ.

ಧರ್ಮ, ನೀತಿ, ಆಚರಣೆ, ಸಾಮಾಜಿಕ ಕಟ್ಟಳೆ, ಸಾಂಪತ್ತಿಕ ಇಲ್ಲವೆ ರಾಜಕೀಯ ಪರಿಸ್ಥಿತಿಯಲ್ಲಿ ಗ್ಲಾನಿಯಾದಾಗ ಅದನ್ನು ನಿವಾರಿಸಿ ಜನತೆಯನ್ನು ಉದ್ಧರಿಸಲು ಧರ್ಮಾತ್ಮರೂ, ನೀತಿ ಬೋಧಕರೂ, ಸಮಾಜ ಸುಧಾರಕರೂ, ರಾಜಕಾರಣಿಗಳೂ, ಕ್ರಾಂತಿಪುರುಷರೂ, ವಿಜ್ಞಾನಿಗಳೂ ಉದಯವಾಗುತ್ತಲಿರುವದು ತ್ರಿಕಾಲಬಾಧಿತ ಸತ್ಯವೆನ್ನುವಷ್ಟು ಸೂತ್ರಬದ್ಧವಾಗಿ ಅದು ನಡೆದಿದೆ. ಇದು ಈಶ್ವರಸಂಕೇತವೆಂದೂ, ಆತನೇ "ಸಂಭವಾಮಿ ಯುಗೇ ಯುಗೇ" ಎಂದೂ ಕೊಟ್ಟ ಆಶ್ವಾಸನದಂತೆ ವರ್ತಿಸುತ್ತಿದ್ದಾನೆಂದೂ ಆಸ್ತಿಕರು ಹೇಳಿದರೆ, ಇದೊಂದು ನಿಸರ್ಗನಿಯಮವೆಂದು, ಇನ್ನಿತರರು ಹೇಳುತ್ತಾರೆ. ರೀತಿ ಭಿನ್ನವಾದರೇನು ಮಾತು ಸತ್ಯ.

೨೦ನೇ ಶತಮಾನದ ಮೊದಲಪಾದದಲ್ಲಿ ಹೈದರಾಬಾದ ಕರ್ನಾಟಕದ ಶಿಕ್ಷಣ, ಸಾಹಿತ್ಯ, ನಿಯತಕಾಲಿಕ ಆರೋಗ್ಯ ಕಲೆ, ಸಂಸ್ಕೃತಿ, ರಾಜಕಾರಣ ಈ ಎಲ್ಲ ರಂಗಗಳಲ್ಲಿ ತುಂಬಾ ಅವನತಿಯುಂಟಾಗಿತ್ತು. ಈ ಯಾವತ್ತೂ ರಂಗಗಳಲ್ಲಿ ಜನ ಜಾಗೃತಿಯನ್ನುಂಟುಮಾಡಿದ ಕ್ರಾಂತಿಪುರುಷರು ಪಂ. ತಾರಾನಾಥರು. ಎಂತಲೇ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಾಖೆಯ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರು ಕಲ್ಬುರ್ಗಿ ಜಿಲ್ಹೆಯ ಶಹಾಪುರದಲ್ಲಿ ನನಗೆ ಉಪನ್ಯಾಸವೀಯಲು ಕೇಳಿಕೊಂಡಾಗ, ನಾನು ಸಂತೋಷದಿಂದ ಒಪ್ಪಿಕೊಂಡು 'ಹೈದರಾಬಾದ ಕರ್ನಾಟಕ ಹಾಗೂ ಪಂ. ತಾರಾನಾಥರು' ಎಂಬ ವಿಷಯದ ಮೇಲೆ ಉಪನ್ಯಾಸವಿತ್ತೆ. ಆದರ ಪ್ರಯೋಜನ ಎಲ್ಲರಿಗೂ ಲಭಿಸುವಂತೆ ಅದಕ್ಕೆ ಪುಸ್ತಿಕೆಯ ಸ್ವರೂಪವೀಯಬೇಕೆಂಬ ಕೋರಿಕೆಗಳಿಗನುಗುಣವಾಗಿ ಆ ನನ್ನ ಉಪನ್ಯಾಸವನ್ನೆ ಅಲ್ಲಷ್ಟು ಇಲ್ಲಷ್ಟು ಹಿಗ್ಗಿಸಿ ಬರೆದುದಾಗಿದೆ. ಇದಕ್ಕೆ ಪ್ರೋತ್ಸಾಹಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನನ್ನ ಕೃತಜ್ಞತೆಗಳು.

ಇದರ ಹಸ್ತ ಪ್ರತಿಯನ್ನು ಸಿದ್ಧಪಡಿಸುವಲ್ಲಿ ನೆರವಾದ ನನ್ನ ಧರ್ಮಪತ್ನಿ ಸೌ. ವಿಮಲಾ ಪಾಟೀಲರಿಗೆ ನೆನಹುಗಳು.

ಧಾರವಾಡ
೧-೩-೧೯೭೩

ಎನ್. ಎ. ಪಾಟೀಲ

ಪರಿವಿಡಿ

೧. ಭಾರತದಲ್ಲಿ ಕರ್ನಾಟಕದ ಪರಿಸ್ಥಿತಿ

ಭರತಖಂಡವು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಹಬ್ಬಿರುವ ಬಹು ವಿಸ್ತಾರವಾದ ಭೂಖಂಡವಾಗಿದೆ. ಪ್ರಾಚೀನ ಕಾಲದಲ್ಲಿ ಅದು ಏಕ ಚಕ್ರಾಧಿಪತ್ಯಕ್ಕೆ ಒಳಪಟ್ಟಿರಲಿಲ್ಲ; ಅದರಲ್ಲಿ ಹಲವಾರು ಸ್ವತಂತ್ರ ರಾಜ್ಯಗಳಿದ್ದವು; ಅವು ಯಾವಾಗಲೂ ಪರಸ್ಪರ ಯುದ್ಧದಲ್ಲಿ ತೊಡಗಿರುತ್ತಿದ್ದವು. ಈ ಕಾರಣಗಳಿಂದ ಭರತಖಂಡವು ರಾಷ್ಟ್ರವಾಗಿರಲಿಲ್ಲ ಎಂಬುದೊಂದು ವಾದವಿದೆ. ಆದರೆ ಇಲ್ಲಿ ಹಲವಾರು ಭಾಷೆಯ ಹಲವಾರು ಕೋಮಿನ ಜನಗಳಿದ್ದರೂ ಸಹ ಅವರೆಲ್ಲರ ನಡೆ, ಸಾಂಪ್ರದಾಯ, ಸಂಸ್ಕೃತಿ, ನಂಬಿಕೆ, ಶೀಲ-ಸ್ವಭಾವ, ಧಾರ್ಮಿಕ ಕಲ್ಪನೆಗಳು ಒಂದೇ ತೆರನಾಗಿವೆ. ಉತ್ತರದ ಹಿಮಾಲಯ ಗಂಗಾ-ಸಿಂಧು, ವಾರಣಾಸಿ, ಬದರಿ, ಕೇದಾರಗಳ ಬಗೆಗೆ ದಕ್ಷಿಣದವರೆಗೂ ಸಹ ಯಾವಾಗಲೂ ಆತ್ಮೀಯತೆ, ಮಾನ್ಯತೆ ಇದೆ. ಅದರಂತೆ ದಕ್ಷಿಣದ ವಿಂಧ್ಯ, ನರ್ಮದಾ, ಗೋದಾವರಿ, ಕಾವೇರಿ, ಗೋಕರ್ಣ, ತಿರುಪತಿ, ರಾಮೇಶ್ವರ, ಮೊದಲಾದವುಗಳ ಬಗೆಗೆ ಉತ್ತರದವರೆಗೂ ಸಹ ಆತ್ಮೀಯತೆ ಇದೆ ಮಾನ್ಯತೆ ಇದೆ. ಇದಲ್ಲದೆ ಭರತ ಖಂಡವು ಅತಿ ಪ್ರಾಚೀನ ಕಾಲದಲ್ಲಿ ದ್ವೀಪವಾಗಿದ್ದಾಗ

ಅದು ಜಂಬೂದ್ವೀಪವೆಂಬ ಪರ್ಯಾಯ ನಾಮವನ್ನೂ ಹೊಂದಿತ್ತು. ಈ ಯಾವತ್ತೂ ಅಂಶಗಳು ಭರತಖಂಡದ ಸಮಗ್ರತೆಯನ್ನೂ, ಅಖಂಡತ್ವವನ್ನೂ, ಅರ್ಥಾತ್ ರಾಷ್ಟ್ರೀಯತ್ವವನ್ನೂ ಪ್ರತಿಪಾದಿಸುತ್ತವೆ.

ಕರ್ನಾಟಕವು ಭಾರತದ ಅವಿಭಾಜ್ಯ ಅಂಗವಾಗಿದ್ದು ಭಾರತದ ಇನ್ನಿತರ ಭಾಗಗಳ ಸ್ಥಿತಿಗತಿಯ ಪ್ರಭಾವವು ಕರ್ನಾಟಕದ ಮೇಲೆಯೂ ಕರ್ನಾಟಕದ ಸ್ಥಿತಿ-ಗತಿ ಪ್ರಭಾವವು ಇಡೀ ಭಾರತದ ಮೇಲೆಯೂ ಆಗುತ್ತಲಿರುವದು ಸ್ವಾಭಾವಿಕವು. ಅಂಗ, ವಂಗ, ಕಳಿಂಗ, ಕಾಶ್ಮೀರ ಮೊದಲಾದವು ಭಾರತದ ಭಾಗಗಳೆಂದೂ ಅವೆಲ್ಲವುಗಳ ಮೇಲೆ ಕನ್ನಡ ನಾಡಿನ ಎರಡನೆಯ ಪುಲಕೇಸಿಯು ಸಾರ್ವಭೌಮತ್ವವನ್ನು ಹೊಂದಿದ್ದನೆಂದೂ ಐಹೊಳೆ ಶಾಸನದಲ್ಲಿ ನಿರೂಪಿತವಾಗಿದೆ ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕರ್ನಾಟಕ-ಸಾಮ್ರಾಜ್ಯವು ಪ್ರಬಲವಾದುದೂ ವಿಸ್ತಾರವಾದುದೂ ಆಗಿತ್ತು

ಪ್ರಾಚೀನ ಕರ್ನಾಟಕವು ಕಲೆ, ಭಾಷೆ, ಧರ್ಮ, ಸಾಹಿತ್ಯ, ರಾಜಕೀಯ ಸಂಸ್ಥೆ, ಸಾಂಸ್ಕೃತಿಕ ಏಕೀಕರಣ ಮತ್ತು ಸಾಮಾಜಿಕ ಜೀವನಪದ್ಧತಿಗಳಲ್ಲಿ ಅಭಿವೃದ್ಧಿಯ ಶಿಖರವನ್ನೇರಿತ್ತು; ಇವೆಲ್ಲವೂ ರಾಷ್ಟ್ರೀಯತೆಯ ಅಸ್ತಿತ್ವದ ಪ್ರಬಲ ಆಧಾರಗಳು-ಎಂಬುದಾಗಿ ಡಾ|| ಆರ್. ಆರ್. ದಿವಾಕರರು

ಕರ್ನಾಟಕದ ಹಿರಿಮೆಯನ್ನು ತಮ್ಮ "ಏಕತಂತ್ರ ಕರ್ನಾಟಕ" ಎಂಬ ಪುಸ್ತಿಕೆಯಲ್ಲಿ ವರ್ಣಿಸಿದ್ದಾರೆ. ಭಾರತದ ಹಿರಿಮೆ-ಗರಿಮೆಗಳಿಗೆ ಕರ್ನಾಟಕವು ನೀಡಿದ ಕೊಡುಗೆಯು ಮಹತ್ತರವಾದುದು, ಅಪ್ರತಿಮವಾದುದು.

ಹೊಯ್ಸಳರು ಕೃಷ್ಣಾನದಿಯ ದಕ್ಷಿಣಕ್ಕೂ ಸೇವುಣರು (ಯಾದವರು) ಕೃಷ್ಣಾನದಿಯ ಉತ್ತರಕ್ಕೂ ಕೆಲವು ಕಾಲ ಅಧಿಕಾರ ನಡೆಸಿದರು. ಸುಪ್ರಸಿದ್ಧವಾದ ವಿಜಯನಗರ ಸಾಮ್ರಾಜ್ಯವೂ ಸಹ ದಕ್ಷಿಣದಲ್ಲಿ ರಾಮೇಶ್ವರ, ಕನ್ಯಾಕುಮಾರಿ ಲಂಕಾದ್ವೀಪದವರೆಗೆ ಹಬ್ಬಿತ್ತು. ವಿಜಯನಗರ ಸಾಮ್ರಾಜ್ಯವು ೧೩೩೬ರಲ್ಲಿ ಹಂಪೆಯಲ್ಲಿ ಸ್ಥಾಪಿಸಲ್ಪಟ್ಟಿತು. ಆದರೆ ಬಹಮನೀ ರಾಜ್ಯವು ೧೩೪೭ರಲ್ಲಿ ಕಲ್ಬುರ್ಗಿಯಲ್ಲಿ ಸ್ಥಾಪಿತವಾಯಿತು. ವಿಜಯನಗರವು ೧೫೬೫ರಲ್ಲಿ ಸೋತ ನಂತರ ಕರ್ನಾಟಕದ ಪ್ರಾಬಲ್ಯ ಹಾಗೂ ಘನತೆಗಳು ಕುಂದಿಹೋದವು.

ಆ ತರುವಾಯ ಕನ್ನಡನಾಡಿನ ಇತರ ಪ್ರದೇಶಗಳು ಹೈದರ ಆಲಿಯ, ಕೆಳದಿ ಇಕ್ಕೇರಿ ಅರಸರ ಹಾಗೂ ಮರಾಠರ ಅನಂತರ ಪೇಶವಾಯಿಗಳ ಆಧೀನದಲ್ಲಿದ್ದವು. ೧೮೧೮ರಲ್ಲಿ ಪೇಶವಾಯಿಯ ಪತನವಾಯಿತು. ಅನಂತರ ಕಂಪನಿ ಸರಕಾರದ ಪ್ರಾಬಲ್ಯವು ಕ್ರಮ ಕ್ರಮೇಣ ಹೆಚ್ಚಾಗಹತ್ತಿತು. ಅದು ಗೆದ್ದುಕೊಳ್ಳುತ್ತ ಹೋದಂತೆ ಆಯಾ ಪ್ರದೇಶದ

ನೆರೆಯ ತಮ್ಮ ಆಡಳಿತ ವಿಭಾಗಕ್ಕೆ ಜೋಡಿಸುತ್ತ ಹೋದು ದರಿಂದ ಹಾಗೂ ಕರ್ನಾಟಕದಲ್ಲಿಯೇ ಇದ್ದ ದೇಶೀಯ ಸಂಸ್ಥಾನಿಕರು ತಮ್ಮ ತಮ್ಮ ಸಂಸ್ಥಾನಗಳ ಆಂತರಿಕ ಆಡಳಿ ತವನ್ನು ತಮ್ಮ ತಮ್ಮ ಕಡೆಗೆ ಇಟ್ಟುಕೊಂಡದರಿಂದ ಕನ್ನಡ ನಾಡು ೧೯ ಬೇರೆ ಬೇರೆ ಆಡಳಿತ ವಿಭಾಗಗಳಲ್ಲಿ ಹಂಚಿ ಹೋಗಿತ್ತು.

ಕಂಪನಿ ಸರಕಾರದ ಆಡಳಿತವನ್ನು ಬ್ರಿಟಿಶ ಸರ ಕಾರವು ವಹಿಸಿಕೊಂಡ ಮೇಲೆ ಭಾರತವು ತನ್ನ ಆಧೀನ ದಲ್ಲಿಯೇ ಉಳಿಯಬೇಕೆಂದೂ, ತನ್ನ ಆಡಳಿತ ನಿರಾತಂಕವಾಗಿ ಮುಂದುವರಿಯಬೇಕೆಂದೂ ಅಭಿಲಾಷೆಯನ್ನು ಹೊಂದಿತ್ತು. ಭಾರತೀಯರ ಕಲೆ, ವಿಜ್ಞಾನ, ಉದ್ಯೋಗ-ಧಂದೆ, ಸಾಂಸ ತ್ತಿಕ ಪರಿಸ್ಥಿತಿ-ಇವುಗಳ ಬೆಳವಣಿಗೆಗೆ ಬ್ರಿಟಿಶರು ಗಮನ ನೀಯಲಿಲ್ಲ. ತತ್ ಪರಿಣಾಮವಾಗಿ ಭಾರತವು ಅವನತಿ ಹೊಂದುತ್ತ ಹೋಯಿತು. ಆದರೆ ಭಾರತವು ಒಂದು ರಾಷ್ಟ್ರ ವಾಗಿದ್ದು ಅದು ತನ್ನ ಉದ್ಧಾರಕ್ಕಾಗಿ ಹೆಣಗದಿದ್ದರೆ ಭಾರ ತದ ಅಭಿವೃದ್ಧಿಯಾಗಲಾರದೆಂದು ಭಾರತದ ಧುರೀಣರು ಬೇಗ ಕಂಡುಕೊಂಡರು. ಅಂತೆಯೇ ಅವರು ಭಾರತದ ಶೈಕ್ಷಣಿಕ, ಸಾಮಾಜಿಕ, ಔದ್ಯೋಗಿಕ, ಸಾಂಪತ್ತಿಕ, ಸಾಂಸ್ಕೃ ತಿಕ ಉನ್ನತಿಗೋಸ್ಕರ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸದರು . ಜಾತೀಯ ಐಕ್ಯವನ್ನು ಸಂಘ ಟಿಸದೇ ಹೋದರೆ ಯಾವ ಗುರಿಯೂ ಸಾಧಿಸಲಾರದೆಂಬ

ಮನವರಿಕೆ ಅವರಿಗಿತ್ತು. ಅಂತೆಯೇ ಜಾತೀಯ ಸೌಹಾರ್ದಕ್ಕಾಗಿ ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ಬಹಳ ಶ್ರಮಪಟ್ಟರು. ಬ್ರಿಟಿಶರು ತಂದ ಯಂತ್ರಗಳ ಪರಿಣಾಮವಾಗಿ ಹಳ್ಳಿಯ ಉದ್ಯೋಗಗಳು ನಶಿಸಿ ಹೋದವುಗಳನ್ನು ಪುನಃ ಸ್ಥಾಪಿಸಿ ಹಳ್ಳಿಗಳು ಸ್ವಯಂಪೂರ್ಣವಾಗುವಂತೆ ಯತ್ನಿಸಿದರು. ಆಗಿನ ಜನತೆಯಲ್ಲಿ ರೂಢವಾಗಿದ್ದ ಸತಿಗಮನ, ಬಾಲವಿವಾಹ, ಸುರಾಪಾನ ಮೂಢನಂಬಿಕೆಗಳನ್ನು ತೊಡೆದು ಹಾಕಲು ಸಾಮಾಜಿಕ ಸುಧಾರಣೆಗಳನ್ನು ಕೈಕೊಂಡರು. ಈ ಗುರಿಯನ್ನು ಸುಲಭವಾಗಿ ಸಾಧಿಸಬೇಕಾದರೆ-ಸಾಧಿಸಲು ಸುಲಭ ಮಾರ್ಗವೆಂದರೆ ಜನತೆಯಲ್ಲಿಯ ನಿರಕ್ಷರತೆಯನ್ನು ತೊಲಗಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡುವದು ಅತ್ಯಗತ್ಯವೆಂದು ಜನತೆಯಲ್ಲಿ ಶಿಕ್ಷಣ ಪ್ರಸಾರವಾಗಲು ಅವರು ಹೆಣಗಿದರು. ಭಾರತೀಯರೆಲ್ಲ ಒಂದೇ ತಾಯಿಯ ಮಕ್ಕಳೆಂಬ ಭಾವನೆಯೇ ಅವರನ್ನು ಈ ಸುಧಾರಣೆಗಳಿಗೆ ಪ್ರೇರೇಪಿಸಿತು.

ಈ ರಾಷ್ಟ್ರೀಯ ಭಾವನೆಯು ಕ್ರಮೇಣ ಬೆಳೆಯತೊಡಗಿತು. ಇದರಿಂದ ಜನಜಾಗೃತಿಯಾಗಿ ಅಖಿಲ ಭಾರತ ಕಾಂಗ್ರೆಸ್ಸಿನ ಸ್ಥಾಪನೆಯಾಯಿತು. ದೇಶದ ಆಡಳಿತದಲ್ಲಿ ಭಾರತೀಯರಿಗೂ ಅವಕಾಶ ಕಲ್ಪಿಸಿಕೊಡಬೇಕೆಂಬ ಬೇಡಿಕೆಯು ಕ್ರಮೇಣ ಬೆಳೆಯುತ್ತ ಹೋಗಿ ಸ್ವರಾಜ್ಯವನ್ನು ಸಂಪಾದಿಸುವ ಹಂಬಲ ಪ್ರಬಲವಾಗಹತ್ತಿತು. ಇದ

ರಿಂದ ಭಯಭೀತವಾದ ಬ್ರಿಟಿಶ ಸರಕಾರವು ತನ್ನ ಕಪಿಮುಷ್ಟಿಯನ್ನು ಬಿಗಿಗೊಳಿಸಿತಲ್ಲದೆ ರಾಷ್ಟ್ರೀಯ ಆಂದೋಲನವನ್ನು ಹತ್ತಿಕ್ಕಲೆತ್ನಿಸಿತು. ಚಳವಳಿ ಹೆಚ್ಚಾದಂತೆ ಸರಕಾರದ ದಬ್ಬಾಳಿಕೆಯೂ, ದಬ್ಬಾಳಿಕೆ ಹೆಚ್ಚಾದಂತೆ ಚಳವಳಿಯು ಬೆಳೆಯತೊಡಗಿದವು, ರಾಷ್ಟ್ರೀಯತೆಯು ರಾಜದ್ರೋಹವೆಂದು ಆಗಿನ ಸರಕಾರವು ಪರಿಗಣಿಸಿತು "ವಂದೇ ಮಾತರಮ್" ಘೋಷಣೆಯೂ ಸಹ ಆಗ ಆಕ್ಷೇಪಾರ್ಹವಾಗಿತ್ತು.

ಆ ಕಾಲಕ್ಕೆ ಈ ಆಂದೋಲನದ ಕೇಂದ್ರವಾಗಿದ್ದ ಬಂಗಾಲವನ್ನು ಬ್ರಿಟಿಶ ಸರಕಾರವು ಇಬ್ಭಾಗಿಸಿ ಹಿಂದೂ-ಮುಸಲ್ಮಾನರಲ್ಲಿ ಜಾತೀಯ ದ್ವೇಷದ ಬೀಜ ಬಿತ್ತಿತು. ಈ ವಂಗಭಂಗದ ವಿರುದ್ಧ ದೇಶವ್ಯಾಪಿ ಆಂದೋಲನ ನಡೆಯಿತು. ಪರದೇಶ ವಸ್ತುಗಳ ಬಹಿಷ್ಕಾರ, ಸ್ವದೇಶೀ ಪುರಸ್ಕಾರದಿಂದಾರಂಭವಾದ ಈ ರಾಷ್ಟ್ರೀಯ ಚಳವಳಿಯು ದಿನೇ ದಿನೇ ಪ್ರಬಲವಾಗಹತ್ತಿತು. ರಾಷ್ಟ್ರೀಯತೆಯನ್ನು ಪ್ರಚೋದಿಸುವ-ಲೇಖನ, ಮುದ್ರಣ, ಭಾಷಣ, ಸಭೆ, ಮೆರವಣಿಗೆ ಮುಂತಾದ ಚಟುವಟಿಕೆಗಳೆಲ್ಲವನ್ನು ಆಗ ಪ್ರತಿಬಂಧಿಸಲಾಗುತ್ತಿತ್ತು. ಸರಕಾರವು ಜನತೆಯ ವಿಚಾರ ಸ್ವಾತಂತ್ರ್ಯವನ್ನೂ ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಂಡಿತ್ತು. ಜಪ್ತಿ, ಝಡತಿ, ಬಂಧನಪತ್ರ, ಸ್ಥಾನಬದ್ಧತೆ ಪ್ರವೇಶ ಪ್ರತಿಬಂಧ, ಗಡೀಪಾರು ಆಜ್ಞೆ, ಶಿಕ್ಷೆ, ಲಾಠಿಪ್ರಹಾರ, ಗೋಳಿಬಾರ-ಇವೆ

ಲ್ಲವೂ ಸರಕಾರದ ದೈನಂದಿನ ಕಾರ್ಯಕಗಳಾದವು. ಇವೆಲ್ಲ ವನ್ನು ಎದುರಿಸಿಯೇ ಅನೇಕ ದೇಶಭಕ್ತರು ತಮ್ಮ ತ್ಯಾಗ ಬಲಿದಾನದಿಂದ ರಾಷ್ಟ್ರೀಯ ಆಂದೋಲನವನ್ನು ಮುಂದು ವರಿಸಿದರು.

ಶಿಕ್ಷಣ ಪ್ರಸಾರವು ಸಾಕಷ್ಟಿಲ್ಲದ ಆ ಕಾಲದಲ್ಲಿ ಜನತೆಯಲ್ಲಿ ರಾಷ್ಟ್ರೀಯ ಭಾವನೆಗಳನ್ನು ಕುದುರಿಸುವದೂ, ರಾಷ್ಟ್ರದ ಕಾರ್ಯಕಲಾಪಗಳಲ್ಲಿ ಅವರನ್ನು ಪ್ರೇರೇಪಿಸು ವದೂ, ಕಠಿಣವಾಗಿತ್ತು. ಆದರೂ ಸಹ ರಾಷ್ಟ್ರಸೇವೆಗೆ ಬದ್ಧಕಂಕಣರಾದ ಹಲವಾರು ದೇಶಸೇವಕರೂ, ದೇಶಸೇವಿ ಕೆಯರೂ ಈ ಆಂದೋಲನದಲ್ಲಿ ಧುಮುಕಿದರು. ಸತ್ಯ-ಅಹಿಂಸೆ ಗಳೇ ಅವರ ಚಳವಳಿಯ ಅಡಿಗಲ್ಲಾದುದರಿಂದ ಸರಕಾರದ ದಬ್ಬಾಳಿಕೆ ಹಾಗೂ ಹಿಂಸಾಚಾರಗಳು ಜನತೆಯಲ್ಲಿ ಕ್ಷೋಭೆ ಯನ್ನುಂಟುಮಾಡಿದವು; ಮತ್ತಿದರಿಂದ ರಾಷ್ಟ್ರೀಯ ಆಂದೋ ಲನವು ಕುಂಠಿತವಾಗುವ ಬದಲು ದ್ವಿಗುಣಗೊಳ್ಳತೊಡಗಿತು.

೨. ಕರ್ನಾಟಕದಲ್ಲಿ ಹೈದರಾಬಾದ (ನಿಜಾಮು) ಕರ್ನಾಟಕದ ಪರಿಸ್ಥಿತಿ

ಬ್ರಿಟಿಶ ಭಾರತದ ಪರಿಸ್ಥಿತಿಯು ಈ ತೆರನಾಗಿದ್ದರೆ ಸಂಸ್ಥಾನೀ ಭಾರತದ ಪರಿಸ್ಥಿತಿಯು ಇದಕ್ಕಿಂತಲೂ ಶೋಚನೀಯವಾಗಿತ್ತು; ಅದರಲ್ಲೂ ಕರ್ನಾಟಕದಲ್ಲಿಯ ದೇಶೀಯ ಸಂಸ್ಥಾನದ ಪರಿಸ್ಥಿತಿಯು ದುರಂತಕಾರಿಯಾಗಿತ್ತು. ನಿಜಾಮು ಕರ್ನಾಟಕದ ಸ್ಥಿತಿಗತಿಯಂತೂ ತುಂಬಾ ಹೃದಯದ್ರಾವಕವಾಗಿತ್ತು.

ನಿಜಾಮು ಕರ್ನಾಟಕದಲ್ಲಂತೂ ಶಿಕ್ಷಣ ಪ್ರಸಾರವು ತೀರ ನಿಕೃಷ್ಟ ಸ್ಥಿತಿಯಲ್ಲಿತ್ತು. ಜನತೆಯ ಮನೆಮಾತು ಕನ್ನಡವಾಗಿದ್ದರೂ ನಿಜಾಮರ ಭಾಷೆ ಉರ್ದುವಾಗಿದ್ದುದರಿಂದ ಸರಕಾರಿ ಆಡಳಿತದ ಭಾಷೆ ಉರ್ದುವೇ ಆಯಿತಲ್ಲದೇ ಉರ್ದು–ಪಾರಸಿ–ಅರಬ್ಬಿ ಭಾಷೆಗಳಿಗೆ ಹಾಗೂ ಸಾಹಿತ್ಯಕ್ಕೆ ಪ್ರಾಶಸ್ತ್ಯ ದೊರೆತಿತ್ತು. ಇಂತು ಹೈದರಾಬಾದ ಕರ್ನಾಟಕ ಕನ್ನಡ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡುವದೂ, ಅವರಲ್ಲಿ ರಾಷ್ಟ್ರೀಯತೆಯನ್ನು ಬಿಂಬಿಸುವದೂ, ರಾಷ್ಟ್ರೀಯ ಚಟುವಟಿಕೆಗಳನ್ನು ನಡೆಸುವದೂ ಅಲ್ಲಿಯ

ದೇಶಭಕ್ತರಿಗೊಂದು ಸಮಸ್ಯೆಯಾಗಿದ್ದರೆ ತದ್ವಿರುದ್ಧ ನಿಜಾಮರು ತಮ್ಮ ಪ್ರಭುಗಳಾದ ಬ್ರಿಟಿಶ ಸರಕಾರವನ್ನು ಸಂತೃಪ್ತಗೊಳಿಸಿ ಸೈ ಸೈ ಎನಿಸಿಕೊಳ್ಳುವ ಅಭಿಲಾಷೆಯಿಂದ ರಾಷ್ಟ್ರೀಯ ಆಂದೋಲನದ ವಿರುದ್ಧ ಕೈಕೊಂಡ ಪ್ರತಿಬಂಧಕ ಆಜ್ಞೆ-ಕ್ರಮ-ಕರಾಳ ಶಾಸನಗಳನ್ನೆದಿರಿಸುವದೊಂದು ಅಗ್ನಿಪರೀಕ್ಷೆಯೇ ಆಗಿತ್ತು. ನಿಜಾಮರಾಜ್ಯಕ್ಕೆ ವೊಗಲಾಯಿ ಎಂಬ ಖ್ಯಾತಿಯಿದೆ ಆಡಿದ್ದೇ ಕಾಯಿದೆ, ಮಾಡಿದ್ದೆ ಕಟ್ಟಳೆ ಎಂಬ ಪ್ರತೀತಿಯಿದ್ದೇ ಇದೆ. ಈ ರಾಷ್ಟ್ರೀಯ ಆಂದೋಲನವನ್ನು ಸದೆ ಬಡೆಯುವಲ್ಲಿ ನಿಜಾಮರು ಕೈಕೊಂಡ ಕ್ರಮಗಳು-ಮೊದಲೇ ಮರ್ಕಟವು, ಆದಕ್ಕೆ ಸುರಾಪಾನವೂ, ವೃಶ್ಚಿಕದಂತವೂ, ಆದರಮೇಲೆ ಕೇಳುವದೇನು ಎನ್ನುವಂತಿದ್ದವು. ಇತರತ್ರ ನಡೆದ ಘಟನೆಗಳನ್ನು ಬ್ರಿಟಿಶ ಸರಕಾರವು ಕದಾಚಿತ್ತ ಕ್ಷುಲ್ಲಕವೆಂದು ಪರಿಗಣಿಸಿ ಕ್ರಮಕೈಕೊಳ್ಳಬಾರದೆಂದು ನಿರ್ಧರಿಸುತ್ತಿದ್ದರೂ, ನಿಜಾಮ ಸರಕಾರವು ಅದನ್ನೆಲ್ಲ ಬಹುದೊಡ್ಡ ರಾಜದ್ರೋಹ-ದೇಶದ್ರೋಹ-ರಾಷ್ಟ್ರದ್ರೋಹ ಎಂದೇ ಪರಿಗಣಿಸಿ ಆ ಕುರಿತು ಅತ್ಯುಗ್ರ ಕ್ರಮಗಳನ್ನು ಕೈಕೊಂಡು ಬ್ರಿಟಿಶ ಸರಕಾರದಿಂದ ಅಹುದಹುದೆನ್ನಿಸಿಕೊಳ್ಳುವ ಲವಲವಿಕೆಯನ್ನು ಹೊಂದಿತ್ತು. ಅಂತೆಯೇ ಅದು ನಿಜಾಮ ಕರ್ನಾಟಕದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಂಥ ಆರ್ಯಸಮಾಜ, ವೀರಶೈವ ಪರಿಷತ್, ಪ್ರಜಾಶಿಕ್ಷಣ ಪರಿಷತ್, ಆಂಧ್ರ ಪರಿಷತ್,

ಮಹಾರಾಷ್ಟ್ರ ಪರಿಷತ್, ರಾಷ್ಟ್ರೀಯ ಮಹಾಸಭಾ ಇವೇ ಮೊದಲಾದ ಸಾಮಾಜಿಕ-ಶೈಕ್ಷಣಿಕ ಸಂಸ್ಥೆಗಳ ಕಾರ್ಯ ಕಲಾಪಗಳನ್ನು ಅದು ಕಣ್ಣಲ್ಲಿ ಎಣ್ಣೆ ಹಾಕಿಗೊಂಡು ನೀರೀಕ್ಷಿಸುತ್ತಿತ್ತು.

ಇಂತಹ ವಿಪರೀತ ಪರಿಸ್ಥಿತಿಯನ್ನೆದುರಿಸಿಯೂ ನಿಜಾಮ ಸಂಸ್ಥಾನದಲ್ಲಿಯ ರಾಷ್ಟ್ರೀಯತಾವಾದಿಗಳಾದ ದೇಶಭಕ್ತರ ಪ್ರಯತ್ನದ ಫಲವಾಗಿ ಕರ್ನಾಟಕ ಸಂಘಗಳು, ಗ್ರಂಥಾಲಯ, ವಾಚನಾಲಯಗಳು ಸ್ಥಾಪಿತವಾದವಲ್ಲದೆ, ರಾಷ್ಟ್ರೀಯ ಉತ್ಸವಗಳೂ, ಸಮಾರಂಭಗಳೂ ನಡೆಯತೊಡಗಿದವು. ಇವೆಲ್ಲವು ಮೊಗಲಾಯಿಯ ಸುಲ್ತಾನರಿಂದ ನಿಜಾಮರ ಹಾಗೂ ಅವರ ಸರಕಾರದ ಆಳರಸರ ಕಣ್ಣು ಕುಕ್ಕಿಸತೊಡಗಿದವು. ಹೀಗಾಗಿ ಅವರು ಹೆಚ್ಚೆಚ್ಚು ಹಿಂಸಾಮಯವಾಗಿ ದಬ್ಬಾಳಿಕೆಯನ್ನವಲಂಭಿಸಿದರು. ಈ ಚಳವಳಿಯನ್ನು ಹಿಂದೂ ಚಳವಳಿಯೆಂದು ನಿಜಾಮ ಸರಕಾರವು ಹೀಗಳೆಯಲು ಹಿಂದೆ ಮುಂದೆ ನೋಡಲಿಲ್ಲ. ಇಸವಿಸನ್ ೧೯೩೦ರ ಕಾಲವು ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ "ಕರಾಳ ಕಾಲ" ವೆಂದು ಇತರತ್ರ ವರ್ಣಿತವಾಗಿದ್ದರೆ ಅದು ಹೈದರಾಬಾದದಲ್ಲಂತೂ "ಹಿಂಸಾತಿರೇಕ"ದ ಕಾಲವಾಗಿತ್ತು.

ಆಗ ಹೈದರಾಬಾದ ಸಂಸ್ಥಾನದಲ್ಲಿ ನಿಜಾಮರ ದಬ್ಬಾಳಿಕೆಯು ಮೇರೆದಪ್ಪಿತು. ಅದೆಷ್ಟೋ ಜನ ಸರಕಾರಿ ನೌಕ

ರರನ್ನು ನೌಕರಿಯಿಂದ ಕಿತ್ತೊಗೆಯಲಾಯಿತು. ಅನೇಕರು ಗಡೀಪಾರು ಮಾಡಲ್ಪಟ್ಟರು. ಹೊರಗಿನಿಂದ ರಾಜಕೀಯ ಮುಂದಾಳುಗಳ ಪ್ರವೇಶಕ್ಕೆ ಪ್ರತಿಬಂಧವನ್ನೊಡ್ಡಲಾಯಿತು. ಚಳವಳಿ ವಿರುದ್ಧ ಭಯಾನಕ ಪರಿಸ್ಥಿತಿಯನ್ನುಂಟು ಮಾಡಿದರೆ ಚಳವಳಿಗಾರರು ಧೃತಿಗೆಟ್ಟು ಹಿಂದೆ ಸರಿಯುವರೆಂಬ ಜನಸಾಮಾನ್ಯರು ಅದರಿಂದ ಅಲಿಪ್ತರಾಗುವರೆಂಬ ಕಲ್ಪನೆ ನಿಜಾಮ ಸರಕಾರದ್ದಾಗಿತ್ತು. ಹಿಂದು ಜನರೇ ಹೆಚ್ಚಾಗಿರುವ ಆ ಸಂಸ್ಥಾನದಲ್ಲಿಯ ರಾಜಕೀಯ ಚಳವಳಿಯಲ್ಲಿ ಸ್ವಾಭಾವಿಕವಾಗಿ ಹಿಂದುಗಳೇ ಹೆಚ್ಚಾಗಿದ್ದುದರಿಂದ ಆ ಚಳವಳಿಗೆ ಜಾತೀಯ ಬಣ್ಣ ಬಳಿಯುವದು ಸುಲಭವಿತ್ತು. ಇಂತಹ ಪ್ರತಿಕೂಲ ಸ್ಥಿತಿಯಲ್ಲಿ ಜನಸಾಮಾನ್ಯರಲ್ಲಿಯ ಭೀತಿಯನ್ನು ತೊಡೆದುಹಾಕಿ ಜಾಗೃತಿಯನ್ನುಂಟು ಮಾಡಬಲ್ಲ ರಾಷ್ಟ್ರೀಯತೆಯನ್ನು ಬೆಳೆಯಿಸಬಲ್ಲ, ಆ ಚಳವಳಿಗೆ ಸಂಘಟನಾ ಸ್ವರೂಪವನ್ನಿತ್ತು ಮಾರ್ಗದರ್ಶನ ಮಾಡಬಲ್ಲ ಮುಂದಾಳುವಿನ ಅವಶ್ಯಕತೆ ಬಹಳವಾಗಿತ್ತು. ಆ ಕೊರತೆಯನ್ನು ನಿವಾರಿಸಿದವರೆಂದರೆ ಪಂಡಿತ ತಾರಾನಾಥರು.

೩. ಪಂ. ತಾರಾನಾಥರ ಬಾಲ್ಯಜೀವನ

ಪಂಡಿತ ತಾರಾನಾಥರು ೧೮೯೧ನೆಯ ಜನೆವರಿ ೫ ರಂದು ಮಂಗಳೂರಲ್ಲಿ ಜನಿಸಿದರು. ಅವರ ತಂದೆಯ ಹೆಸರು ಗೋವಿಂದರಾವ್. ತಾಯಿಯ ಹೆಸರು ರಾಜೀವಬಾಯಿ. ಇವರಿಗೆ ಅಮೃತರಾಯ ಎಂಬ ತಮ್ಮನೂ ನಾಲ್ಕು ಜನ ಸಹೋದರಿಯರೂ ಇದ್ದರು.

ಪಂ. ತಾರಾನಾಥರಿಗೆ ನೆನಪಿನ ಶಕ್ತಿಯು ಅಸಾಧಾರಣವಾಗಿತ್ತು. ಒಮ್ಮೆ ಓದಿದ್ದನ್ನು ಕೊನೆಯುವರೆಗೂ ನೆನಪಿಡುವ ಶಕ್ತಿ ಶ್ರೀ ಸಾಮಾನ್ಯನಿಗೆ ಅಸಹಜವಾದುದು. ಶಾಲೆಯ ಗುರುಗಳಿಗೆ ಅನೇಕ ಕುತೂಹಲಕಾರಕ ಪ್ರಶ್ನೆಗಳನ್ನು ಕೇಳುತ್ತಿದ್ದರು; ಮತ್ತು ಅವರ ಸಂಪ್ರೀತಿಗೆ ಪಾತ್ರರಾಗುತ್ತಿದ್ದರು. ಇವರು ಕೇವಲ ಓದಿನಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯದೆ ಆಟಪಾಟಗಳಲ್ಲಿಯೂ ಸಹ ನಿಷ್ಣಾತರಾಗಿದ್ದರು.

ಪಂ. ತಾರಾನಾಥರು ೧೧ ವರ್ಷದವರಿದ್ದಾಗ್ಗೆ ತಂದೆಯವರು ನಿಧನರಾದರು. ತಂದೆಯ ನಿಧನದಿಂದ ಅವರ ತಾಯಿಯವರ ಮೇಲೆ ಸಂಸಾರದ ಹೊಣೆ ಅಧಿಕವಾಯಿತು.

ಮಕ್ಕಳ ಶಿಕ್ಷಣದ ಹೊಣೆಯಂತೂ ಹೆಚ್ಚಿನ ಜವಾಬ್ದಾರಿಗೆ ಪೋಷಕವಾಯಿತು.

ಕೆಲವು ದಿನಗಳು ಕಳೆದ ನಂತರ ಪಂ. ತಾರಾನಾಥರ ತಾಯಿಯವರು ಅನಾರೋಗ್ಯದಿಂದ ಮರಣಹೊಂದಿದರು. ಮರಣಪೂರ್ವದಲ್ಲಿ ರಾಜೀವಬಾಯಿಯವರು ಹೈದರಾಬಾದ ದಿಂದ ತಮ್ಮ ಸಹೋದರಿ ಲೀಲಾಬಾಯಿಯವರನ್ನು ಕರೆಸಿ ಕೊಂಡು ತಮ್ಮ ಮಕ್ಕಳ ಯೋಗಕ್ಷೇಮವನ್ನು ನೋಡಿ ಕೊಳ್ಳಲು "ನನ್ನ ಸಮಯ ಮುಗಿಯಿತು; ಈ ಮಕ್ಕಳ ಯೋಗಕ್ಷೇಮವನ್ನು ನೀನು ನೋಡಿಕೊಳ್ಳಬೇಕು" ಎಂದು ಕಳಕಳಿಯಿಂದ ಕೇಳಿಕೊಂಡರು. ಹೀಗೆ ತಾಯಿಯ ಮರಣದ ನಂತರ ಪಂ. ತಾರಾನಾಥರು ತಮ್ಮ ಸಹೋದರ ಸಹೋದರಿ ಯರೊಂದಿಗೆ ತಮ್ಮ ಚಿಕ್ಕಮ್ಮನ ಜೊತೆಗೆ ೧೯೦೮ನೇ ಇಸ್ವಿ ಯಲ್ಲಿ ಹೈದರಾಬಾದಿಗೆ ತೆರಳಿದರು.

೪. ಪಂ. ತಾರಾನಾಥರ ವಿದ್ಯಾರ್ಥಿ ಜೀವನ

ಪಂ. ತಾರಾನಾಥರು ಹೈದರಾಬಾದಕ್ಕೆ ಬಂದನಂತರ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಅದರಂತೆ ಅವರ ಸಹೋದರ-ಸಹೋದರಿಯರ ವಿದ್ಯಾಭ್ಯಾಸವೂ ನಡೆಯಿತು. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಎಫ್ ವಾಯ್. ಅಭ್ಯಾಸ ಮಾಡುವಾಗ ಬಿಡುವಿನ ವೇಳೆಯಲ್ಲಿ ಗ್ರಂಥಗಳನ್ನು ಓದುತ್ತಿದ್ದರು. ಉರ್ದು, ತೆಲುಗು, ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಪಾರಂಗತರಾದರು. ಅವರಿಗೆ ೧೮ಕ್ಕಿಂತ ಹೆಚ್ಚು ಭಾಷೆಗಳ ಜ್ಞಾನವಿತ್ತೆಂದು ತಿಳಿದುಬರುತ್ತದೆ. ಅನೇಕ ಶಾಸ್ತ್ರಗಳ ಅಧ್ಯಯನವನ್ನು ಸಹ ಮಾಡಿದ್ದಾರೆ. ಪವಿತ್ರ ಗ್ರಂಥಗಳಾದ ಬೈಬಲ್, ಕುರಾನ್ ವೇದೋಪನಿಷತ್ತುಗಳ ಜ್ಞಾನವನ್ನು ಪಡೆದರು. ಇದಲ್ಲದೆ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ರಾಸಾಯನಶಾಸ್ತ್ರ ಬೌತಶಾಸ್ತ್ರ, ಮನಶಾಸ್ತ್ರ ಕಲೆ, ವಿಜ್ಞಾನ, ಸಾಹಿತ್ಯ ಮುಂತಾದ ವಿಷಯಗಳ ಪರಿಚಯವನ್ನೂ ಮಾಡಿಕೊಂಡರು.

ಕಾಲೇಜಿನ ವಿವಿಧ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು. ಸಂಗೀತ ಮತ್ತು ಚರ್ಚಾಸ್ಪರ್ಧೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಮೇಲಾಗಿ ಪ್ರಕಾಂಡ

ಸಾಹಿತಿಯೆಂದು ಪ್ರಸಿದ್ಧಿ ಪಡೆದರು. ಜನರೆಲ್ಲ ಅವರನ್ನು "ಪಂಡಿತರು" ಎಂದು ಗೌರವದಿಂದ ಸಂಬೋಧಿಸುತ್ತಿದ್ದರು. ಆದ್ದರಿಂದ ಅವರಿಗೆ ಪಂಡಿತ ತಾರಾನಾಥ ಎಂದು ಸಂಬೋಧಿಸುವರು.

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ನಿಜಾಮ ಕಾಲೇಜಿನಲ್ಲಿ ಎರಡು ವರ್ಷ ಅಭ್ಯಾಸ ಮುಗಿಸಿ ಮೆಡಿಕಲ್ ಸ್ಕೂಲನ್ನು ಸೇರಿದರು. ಮುಂದೆ ವರಿಷ್ಠಾಧಿಕಾರಿಗಳು ಇವರ ಯೋಗ್ಯತೆ ಪಾತ್ರತೆಗಳನ್ನು ಕಡೆಗಣಿಸಿ ಪರದೇಶದ ಶಿಷ್ಯವೇತನ ಬೇರೆಯವರಿಗೆ ಸಿಗುವಂತೆ ಮಾಡಿದ್ದರಿಂದ ಮೆಡಿಕಲ್ ಸ್ಕೂಲನ್ನು ಸಹ ತ್ಯಜಿಸಿದರು.

ಅಲ್ಲಿರುವಾಗಲೇ ವಿದ್ಯಾರ್ಥಿಗಳನ್ನು ಸಂಘಟಿಸಿ ಉತ್ತಮ ಸಂಘಟಕ ಮತ್ತು ಶ್ರೇಷ್ಠ ಸಾಹಿತಿ ಎಂದು ಪ್ರಸಿದ್ಧಿಯನ್ನು ಗಳಿಸಿದರು. ಉದಾ– ಹೈದರಾಬಾದ ನಗರದಲ್ಲಿ ಪ್ರಜಾಪ್ರಭುತ್ವ ಚಳವಳಿಯು ಒಳ್ಳೇ ಜೋರಿನಿಂದ ನಡೆಯಿತು. ವಿದ್ಯಾರ್ಥಿ ದೆಶೆಯಲ್ಲಿರುವಾಗಲೇ ಜನತೆಯಲ್ಲಿ ವಿಚಾರ ಜಾಗೃತಿ ಮಾಡಲು ಪ್ರಾರಂಭಿಸಿದರು. ಅಲ್ಲಲ್ಲಿ ಉಪನ್ಯಾಸ ಶಿಬಿರಗಳನ್ನೇರ್ಪಡಿಸಿದರು. ಸಾಹಿತ್ಯ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಂ. ತಾರಾನಾಥರು ಭಾಷಣ ಮಾಡುತ್ತಿದ್ದರು. ಹೈದರಾಬಾದಿನಲ್ಲಿ ದೇಶೀಬಾಂಬ ತಯಾರ ಮಾಡುತ್ತಿದ್ದರೆಂದೂ ಅವರ ತಯಾರಿಕೆಯಲ್ಲಿ ಪಂ. ತಾರಾನಾಥರ ಕೈವಾಡವಿದೆ

ಯೆಂಬ ವರದಿಯು ಕಾಲೇಜಿನ ಪ್ರಿನ್ಸಿಪಾಲರಿಗೆ ತಲುಪಿತು. ಹೀಗೆ ದೇಶೀ ಬಾಂಬ ತಯಾರಿಕೆಯ ಆಪಾದನೆಯನ್ನು ಪಂ. ತಾರಾನಾಥರ ಮೇಲೆ ಹೊರಿಸಲಾಯಿತು.

೫. ಅಧ್ಯಾಪಕ ವೃತ್ತಿ-ವಿದ್ಯಾರ್ಥಿ ವೃಂದದಲ್ಲಿ ನವ ಚೈತನ್ಯ: ಶಿಸ್ತು, ಓರಣ

೧೯೧೦ರ ಸುಮಾರಿಗೆ ಶಿಕ್ಷಣ ಖಾತೆಯನ್ನು ಸೇರಿ ಬೀದರಿನಲ್ಲಿ ಅಧ್ಯಾಪಕರಾದರು. ಇವರಿಗೆ ಆಳವಾದ ವಿಷಯ ಜ್ಞಾನವಿದ್ದುದರಿಂದ ಯಾವ ವಿಷಯವನ್ನು ಕೊಟ್ಟರೂ ಚೆನ್ನಾಗಿ ಕಲಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಶಿಸ್ತು ಸಂಘಟನಾ ಕಲಿಸುತ್ತಿದ್ದರು. ಅಂತೆಯೇ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿ ನವರಾಗಿದ್ದರು ಅನ್ಯಾಯ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡುತ್ತ ಸ್ವಲ್ಪೇ ದಿನಗಳಲ್ಲಿ ಜನತೆಯ ಸಹಾನೂಭೂತಿ ಯನ್ನು ಗಳಿಸಿದರು. ನಾಲ್ಕು ವರ್ಷ ಬೀದರಿನಲ್ಲಿ ಸೇವೆ ಸಲ್ಲಿಸಿ ೧೯೧೪ರ ಸುಮಾರಿಗೆ ರಾಯಚೂರಿಗೆ ವರ್ಗವಾಗಿ ಸರಕಾರಿ ಮಿಡಲ್ ಸ್ಕೂಲಿನಲ್ಲಿ ಮೊದಲನೆಯ ಸಹಾಯಕ ಅಧ್ಯಾಪಕರಾದರು.

ಅಧ್ಯಾಪಕರಾಗಿ ಅವರು ಮಾಡಿದ ಸೇವೆ ಅನುಪಮ ವಾದುದು. ವಿದ್ಯಾರ್ಥಿ ವೃಂದದಲ್ಲಿ ನವಚೈತನ್ಯ ತುಂಬಿದರು.

ವಿದ್ಯಾರ್ಥಿಗಳ ಹಕ್ಕುಗಳಾವವು ಮತ್ತು ಅವುಗಳನ್ನು ಸಾಮೂಹಿಕವಾಗಿ ಹೇಗೆ ಪ್ರತಿಪಾದಿಸಬೇಕು ಎಂಬ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಿದರು. ಸಂಪಿನ ಅಸ್ತ್ರವನ್ನು ಕಲಿಸಿದರು. ಸತ್ಯ ಮತ್ತು ಆತ್ಮವಿಶ್ವಾಸದ ಬೆಲೆಯನ್ನು ಬೋಧಿಸಿದರು.

ರಾಯಚೂರಿನಲ್ಲಿ ಕಾರ್ಯಕರ್ತರ ತಂಡವನ್ನು ಕೂಡಿಸಿ ಅನ್ಯಾಯ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡಲು ಜನರ ಮನಸ್ಸನ್ನು ತಮ್ಮೆಡೆಗೆ ಆಕರ್ಷಿಸಿದರು. ಸರಕಾರಿ ಸೇವೆಯನ್ನು ೧೯೧೯ರ ಕೊನೆಯಲ್ಲಿ ತ್ಯಜಿಸಿ ಮಾರ್ಚ ೧೯೨೦ರಲ್ಲಿ "ಹಮ್‌ದರ್ದ ಪ್ರೌಢ ಶಾಲೆ" ಎಂಬ ಖಾಸಗಿ ಶಿಕ್ಷಣ ಸಂಸ್ಥೆಯನ್ನು ರಾಯಚೂರಿನಲ್ಲಿ ಸ್ಥಾಪಿಸಿದರು. ಅದು ರಾಷ್ಟ್ರೀಯ ಶಾಲೆಯೋಪಾದಿಯಲ್ಲಿತ್ತು. ಅದು ಶೀಘ್ರವಾಗಿ ಬೆಳೆದು ಊರ್ಜಿತಾವಸ್ಥೆಯನ್ನು ಹೊಂದಿ ರಾಜ್ಯದಲ್ಲಿಯ ಸಂಸ್ಥೆಗಳಲ್ಲಿಯೇ ಅಗ್ರಸ್ಥಾನ ಪಡೆಯಿತು. ರಾಷ್ಟ್ರೀಯ ಕಾರ್ಯಕರ್ತರ ಚಟುವಟಿಕೆಗಳನ್ನು ಚುರುಕುಗೊಳಿಸತೊಡಗಿತು. ಅನ್ಯಾಯ ಮತ್ತು ಶೋಷಣೆ ಯಾವದೇ ರೂಪದಲ್ಲಿರಲಿ ಅದರ ವಿರುದ್ಧ ಹೋರಾಡಿ ಆಗಿನ ಸರಕಾರದ ವಿರುದ್ಧ ದಿಟ್ಟತನದಿಂದ ಲೇಖನಗಳನ್ನು ಬರೆಯುತ್ತಿದ್ದರು. ಅವರ ವಿಚಾರ ಪ್ರಚೋದಕ ಲೇಖನಗಳು ಹೈದರಾಬಾದಿನ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು.

೬. ಪಂ. ತಾರಾನಾಥರ ಮೇಲೆ ಆದ ಪ್ರಭಾವಗಳು

೧. ೧೫ ವರ್ಷದ ಬಾಲಕನಿದ್ದಾಗ ಪಂ. ತಾರಾನಾಥರು ಗಣಪತಿ ಮಹಾಮಂತ್ರದ ಸಿದ್ಧಿಯನ್ನು ಬೀದರಿನಲ್ಲಿ ಒಬ್ಬ ಸಂನ್ಯಾಸಿಯಿಂದ ಕಲಿತರು.

೨. ಸೂರ್ಯನಮಸ್ಕಾರ ಪದ್ಧತಿಯನ್ನು ಮಂಗಳೂರಿನಲ್ಲಿಯೇ ತಿಳಿದುಕೊಂಡಿದ್ದರು.

೩. ಸೂರ್ಯನಾರಾಯಣನ ಉಪಾಸನಾ ಮಂತ್ರವನ್ನು ಬೀದರಿನಲ್ಲಿ ಒಬ್ಬ ಸಾಧುವಿನಿಂದ ಕಲಿತುಕೊಂಡರು.

೪. ಹೈದರಾಬಾದಿನಲ್ಲಿರುವಾಗ ಪಂ. ತಾರಾನಾಥರಿಗೆ ಒಮ್ಮೆ ತೀವ್ರತರ ಕಾಯಿಲೆಯಾಯಿತು. ಗೋವಿಂದಜಿ ಎಂಬವರು ಆಗ ನಿಜಾಮರ ವೈದ್ಯರಾಗಿ ಪ್ರಸಿದ್ಧಿಯನ್ನು ಗಳಿಸಿದ್ದರು. ಗೋವಿಂಡಜಿಯವರ ಔಷಧೋಪಚಾರಗಳಿಂದ ಪಂ. ತಾರಾನಾಥರ ಕಾಯಿಲೆಯು ವಾಸಿಯಾಯಿತು. ಅಂದಿನಿಂದ ಅವರಿಗೆ ವೈದ್ಯಶಾಸ್ತ್ರದ ಬಗ್ಗೆ ತಿಳಿದುಕೊಳ್ಳುವ ಹಂಬಲವುಂಟಾಯಿತು. ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಓದಲು

ಪ್ರಾರಂಭಿಸಿದರು. ಇವರ ಜ್ಞಾನಪಿಪಾಸೆಯನ್ನು ತಿಳಿದ ಗೋವಿಂದಜಿಯುವರು ಆಯುರ್ವೇದ ಔಷಧಿಗಳನ್ನು ತಯಾರು ಮಾಡುವ ಗಿಡಮೂಲಿಕೆಗಳ ಜ್ಞಾನವನ್ನು ಪಂ. ತಾರಾನಾಥರಿಗೆ ಮಾಡಿಕೊಟ್ಟರು. ನಾಡಿಪರೀಕ್ಷೆ, ಭಸ್ಮ ಸಿಂಧೂರಗಳನ್ನು ಹೇಗೆ ತಯಾರಿಸಬೇಕೆಂಬುದನ್ನು ಮಾಹಿತಿ ಮಾಡಿಕೊಟ್ಟರು.

ಗೋವಿಂದಜಿಯುವರಲ್ಲಿಗೆ ನಾನಾ ತರಹದ ರೋಗಿಗಳು ಬರುತ್ತಿದ್ದರು. ಪಂ. ತಾರಾನಾಥರನ್ನು ರೋಗಿಗಳ ತಪಾಸಣೆಗೆ ಗೋವಿಂದಜಿಯುವರು ಹಚ್ಚುತ್ತಿದ್ದರು. ರೋಗದ ಲಕ್ಷಣವನ್ನು ಕಂಡುಹಿಡಿಯಲು ತಿಳಿಸುತ್ತಿದ್ದರು. ರೋಗ ತಪಾಷಣೆಯಾದ ಮೇಲೆ ಗೋವಿಂದಜಿಯುವರು ಔಷಧಗಳನ್ನು ಆಯಾ ರೋಗಿಗಳಿಗೆ ಕೊಟ್ಟು ಗುಣಪಡಿಸುತ್ತಿದ್ದರು, ಈ ಒಂದು ಸುಸಮಯ ಪಂ. ತಾರಾನಾಥರಿಗೆ ಮುಂದೆ ಪ್ರಸಿದ್ಧ ವೈದ್ಯರಾಗುವದಕ್ಕೆ ನಾಂದಿಯಾಯಿತು. ಅವರ ಭಾವೀ ಜೀವನದ ಸುಳುಹು ಇಲ್ಲಿಯೇ ಅಂಕುರಿಸಿತೆನ್ನಬಹುದು. ರೋಗಿಗಳ ಲಕ್ಷಣವನ್ನು ಕಂಡುಹಿಡಿಯುವಲ್ಲಿ ವಿಲಕ್ಷಣವಾದ ಜ್ಞಾನವನ್ನು ಸಂಪಾದಿಸಿದರು. ಇದಲ್ಲದೆ ಆಯುರ್ವೇದ, ಯುನಾನಿ ಮತ್ತು ಅಲೋಪತಿಗಳ ಮುಖಾಂತರ ಚಿಕಿತ್ಸೆಗಳನ್ನು ಮಾಡುವ ವಿಧಾನವನ್ನೂ ಸಹ ಅರಿತುಕೊಂಡರು.

೫ ಹೈದರಾಬಾದಿನಲ್ಲಿರುವ ಯೋಗೀಶ್ವರಾನಂದರ ಸಂಪರ್ಕಕ್ಕೆ ಪಂ. ತಾರಾನಾಥರು ಆಗಾಗ್ಗೆ ಹೋಗಿ ಬರುತ್ತಿದ್ದರು. ಯೋಗೀಶ್ವರಾನಂದರು ಶಕ್ತಿಪೂಜೆ ಮುಂತಾದ ಅಲೌಕಿಕ ಶಕ್ತಿಗಳ ಜ್ಞಾನವನ್ನು ಸಂಪಾದಿಸಿದ್ದರು. ಹೋಮಿಯೋಪತಿಯಲ್ಲಿ ನಿಷ್ಣಾತರಾಗಿದ್ದರು. ಇವುಗಳ ಮಾಹಿತಿಯನ್ನು ಪಂ. ತಾರಾನಾಥರಿಗೆ ಯೋಗೀಶ್ವರಾನಂದರು ಹೇಳಿಕೊಟ್ಟರು.

೬ ಕೆಲವು ವರ್ಷಗಳು ಕಳೆದ ಮೇಲೆ ನೇಪಾಳದ "ಉತ್ತಮದಾಸ ಪರಮಹಂಸ" ಮತ್ತು "ಮಂಗಯ" ಎಂಬ ಯೋಗಿಗಳ ಪರಿಚಯವು ಪಂ. ತಾರಾನಾಥರಿಗೆ ಆಯಿತು. ಇವರ ಸಂಪರ್ಕದಿಂದ ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಿದರು; ಯೋಗ ಸಾಧನೆಯನ್ನು ಕಲಿತರು. ವಿವಿಧ ಆಸನಗಳಾದ ಶೀರ್ಷಾಸನ, ಪದ್ಮಾಸನ, ಗರ್ಭಾಸನ, ಮಯೂರಾಸನ ಮುಂತಾದ ಆಸನಗಳನ್ನು ಸತತ ಪರಿಶ್ರಮವಹಿಸಿ ಕಲಿತುಕೊಂಡರು.

೭. ಎಚ್. ವ್ಹಿ. ಕೃಷ್ಣಸ್ವಾಮಿಯವರು ಹೈದರಾಬಾದಿನ ನಿಜಾಮ ಕಾಲೇಜಿನಲ್ಲಿ ಇಂಗ್ಲೀಷ ಪ್ರಾಧ್ಯಾಪಕರಾಗಿದ್ದರು. ಅವರ ಸಹವಾಸದಿಂದ ಪಂ. ತಾರಾನಾಥರು ಸಾಹಿತ್ಯಕ ಅಭಿರುಚಿಯನ್ನು ಬೆಳೆಸಿಕೊಂಡರು.

ಹೀಗೆ ಪಂ. ತಾರಾನಾಥರಿಗೆ ಸಾಧು ಸಜ್ಜನರ ಸಹವಾಸ, ಯೋಗಿಗಳ ಆಕಸ್ಮಿಕ ದರ್ಶನ, ವೈದ್ಯಕೀಯ ಪಂಡಿ

ತರ ಪರಿಚಯ ಮತ್ತು ಸಾಹಿತಿಗಳ ಸಂಪರ್ಕ ಎಲ್ಲವೂ ಪೂರ್ವಯೋಜಿತವಿಲ್ಲದೆ ಆಕಸ್ಮಿಕವಾಗಿ ಕೂಡಿ ಬರುತ್ತಿದ್ದವು. ಇವರೆಲ್ಲರ ಸಂಪರ್ಕದಿಂದ ಲೌಕಿಕ ಮತ್ತು ಪಾರಮಾರ್ಥಿಕ ಜ್ಞಾನಾರ್ಜನೆಯನ್ನು ಮಾಡಿದರು. ಜಟಿಲ ಸಮಸ್ಯೆಗಳನ್ನು ಪರಿಹರಿಸುವಲ್ಲಿಯೂ ಶಕ್ತಿಯನ್ನು ಪಡಕೊಂಡರು.

೭. ನಿಜಾಮರು "ಇಂಡಿಯನ್(ಓ) ಡಾಯರ್"

೧೯೧೮ರ ಸುಮಾರಿಗೆ ನಿಜಾಮರು ಜನರಿಂದ ನಝರಾನಾ ಎಂಬ ತೆರಿಗೆಯನ್ನು ಜಿಲ್ಲಾ ಮತ್ತು ಆಫೀಸರರ ಮುಖಾಂತರ ವಸೂಲು ಮಾಡುತ್ತಿದ್ದರು. ಜನರಿಗೆ ಇಷ್ಟವಿರಲಿ ಅಥವಾ ಇಲ್ಲದೆ ಇರಲಿ ನಿಜಾಮರಿಗೆ ಅಶರಾಫಿಸ್‌ನ್ನು ಬಲವಂತವಾಗಿ ಕೊಡಬೇಕಾಗುತ್ತಿತ್ತು. ಅದು ಕಾಯಂ ಕರವಾಗಿಯೇ ಪರಿಣಮಿಸಿತ್ತು. ದಂಡನೆಯ ಹೆದರಿಕೆಯಿಂದ ಜನರಿಗೆ ಇವನ್ನು ವಿರೋಧಿಸುವ ಧೈರ್ಯವಿರಲಿಲ್ಲ. ಇದು ಬಡ ಜನತೆಗೆ ಭಾರವಾಗುತ್ತಿತ್ತು. ಇಂಥ ಅಮಾನುಷ ಪದ್ಧತಿಯ ವಿರುದ್ಧ ಹೋರಾಡಲು ಯಾವ ಸಂಘವಾಗಲಿ ಅಥವಾ ಚಳವಳಿಯಾಗಲಿ ಇರಲಿಲ್ಲ.

೧೯೧೯ರಲ್ಲಿ ಜಾಲಿಯನವಾಲಾಬಾಗ ದುರಂತದಿಂದ ಪಂ. ತಾರಾನಾಥರ ಮನಸ್ಸು ರೋಸಿ ಹೋಗಿತ್ತು. ಅವರಿಗೆ ನಿಜಾಮರ ದಬ್ಬಾಳಿಕೆಯಂತೂ ಅಸಹ್ಯಕರವಾಗಿತ್ತು. ಮದ್ರಾಸಿನ (ಈಗಿನ ತಮಿಳು ನಾಡು) "ಹಿಂದೂ" ಪೇಪರಿನಲ್ಲಿ ನಿಜಾಮರು "ಇಂಡಿಯನ್ ಡಾಯರ್" ಎಂಬ ಲೇಖನವನ್ನು ಬರೆದೇ ಬಿಟ್ಟರು. ರಾಜಬಹಾದ್ದೂರ ಎಂಬ ಅವರ ವಿದ್ಯಾರ್ಥಿ ಹೆಸರಿನಲ್ಲಿ ಆ ಲೇಖನವು ಪ್ರಕಟವಾಯಿತು.

ಅಂದಿನ ಪೋಲಿಸ್ ಮತ್ತು ಜೈಲುಗಳ ಇನಸ್ಪೆಕ್ಟರ ಜನರಲ್‌ರಾದ ಮಹಮ್ಮದ ಅಲಿಯವರು ನಿಜಾಮ ಸರಕಾರದ ಕಾರ್ಯದರ್ಶಿಯವರಿಗೆ ಪಂ ತಾರಾನಾಥರ ಕಾರ್ಯಚಟುವಟಿಕೆಗಳ ಬಗ್ಗೆ ಮೇ ೨೨, ೧೯೨೨ರಂದು ಹೀಗೆ ಬರೆದಿದ್ದಾರೆ :

ಅನಾಮಧೇಯ ಬೆದರಿಕೆಯ ಪತ್ರಗಳು ನಿಜಾಮರಿಗೂ ಮತ್ತು ರೆಸಿಡೆಂಟರಿಗೂ ತಲುಪಿವೆ. ಅವುಗಳನ್ನು ಪತ್ತೆ ಹಚ್ಚುವ ಕಾರ್ಯ ಪ್ರಗತಿಪಥದಲ್ಲಿದೆ ನಂಬಲರ್ಹವಾದ ಮೂಲಗಳಿಂದ ಸ್ಥಾನಿಕ ಮೆಡಿಕಲ್ ಸ್ಕೂಲಿನಿಂದ ಕೆಲವು ಮೆಡಿಕಲ್ ವಿದ್ಯಾರ್ಥಿಗಳಿಂದ ಈ ಪತ್ರಗಳು ಒರೆಯಲ್ಪಟ್ಟವೆಂದೂ, ತಾರಾನಾಥ ಹಾಗೂ ದುರುಪದೇಶಕರಿಗೆ ಈ ಪತ್ರಗಳ ಸಂಬಂಧವಿದೆಯೆಂದೂ ತಿಳಿದುಬರುತ್ತದೆ. "ಹಿಂದೂ" ಪತ್ರಿಕೆಯಲ್ಲಿ ನಮ್ಮ ಸರಕಾರದ ವಿರುದ್ಧ ತಾರಾನಾಥರು

ಅನೇಕ ಲೇಖನಗಳನ್ನು ಬರೆದಿದ್ದಾರೆ. ರಾಯಚೂರಿನಲ್ಲಿಯೇ ಅನೇಕ ದಿನಗಳಿಂದ ವಾಸವಾಗಿದ್ದಾರೆ. ಅವರ ವಿಚಾರಗಳು ಯಾವಾಗಲೂ ನಿಜಾಮ ಸರಕಾರ ಮತ್ತು ಬ್ರಿಟಿಶ ಸರಕಾರದ ವಿರುದ್ಧವಾಗಿಯೇ ಇವೆ. ರಾಜಬಹಾದ್ದೂರ ಎಂಬ ಅವರ ಇನ್ನೊಬ್ಬ ಸಹಾಪರಾಧಿ (ತಾರಾನಾಥರ ವಿದ್ಯಾರ್ಥಿ) "ಹಿಂದೂ" ಪೇಪರಿನಲ್ಲಿ ಕಳೆದ ಅಕ್ಟೋಬರ ತಿಂಗಳಲ್ಲಿ ಅಂಥ ಬೆದರಿಕೆಯ ಪತ್ರಗಳನ್ನು ಬರೆದುದರ ಪರಿಣಾಮವಾಗಿ ಡಿಸೆಂಬರ ೯ ರಂದು ದಸ್ತಗಿರಿ ಮಾಡಿ ಹೈದರಾಬಾದಕ್ಕೆ ಒಯ್ದು ಮುಂದೆ ಮುನ್ನಾನೂರಲ್ಲಿ ೩ನೇ ಜನೇವರಿ ೧೯೨೧ರಲ್ಲಿ ಜೈಲಿನಲ್ಲಿಡಲಾಯಿತು.

ಆ ಲೇಖನದ ಪರಿಣಾಮವಾಗಿ ನಿಜಾಮರು ನಝರಾನಾ ವಸೂಲಿಯನ್ನು ನಿಲ್ಲಿಸಿದರು. ಇದು ನಿಜಾಮರ ವಿರುದ್ಧ ನಡೆದ ಮೊದಲನೇ ಚಳವಳಿ ಎಂದು ಹೇಳಬಹುದು.

೮. ಪ್ರೇಮಾಯತನ ಆಶ್ರಮ ಸ್ಥಾಪನೆ

೧೯೨೧ರ ಸುಮಾರಿಗೆ ಬಳ್ಳಾರಿ ಜಿಲ್ಲೆಗೆ ಸೇರಿದ ತುಂಗ ಭದ್ರಾ ದಂಡೆಯ ಮೇಲೆ "ಪ್ರೇಮಾಯತನ" ಎಂಬ ಆಶ್ರಮ ವನ್ನು ಸ್ಥಾಪಿಸಿದರು. ಈ ಭಾಗಕ್ಕೆ ಆಗ್ಗೆ ತುಂಗಭದ್ರಾ

ಎಂದು ಕರೆಯುತ್ತಿದ್ದರು. ಈ ಆಶ್ರಮವು ಮಂತ್ರಾಲಯಂ ರೈಲು ನಿಲ್ದಾಣದಿಂದ ಸುಮಾರು ೩ ಫರ್ಲಾಂಗದಲ್ಲಿದೆ. "ಪ್ರೇಮ ವಿದ್ಯಾಪೀಠ" ಎಂದು ಸರಕಾರದ ರಜಿಸ್ಟರದಲ್ಲಿ ದಾಖಲಾಗಿದೆ. 'ಪ್ರೇಮಾಯತನ'ವೆಂದು ಆಶ್ರಮಕ್ಕೆ ಹೆಸರಿಟ್ಟಿದ್ದಾರೆ. ಆ ಹೆಸರಿನ ಉದ್ದೇಶವನ್ನು ಅವರ ಮಾತಿನಲ್ಲಿಯೇ ಅರ್ಥವಿಸಿಕೊಳ್ಳುವದು ಉಚಿತ:

"ಧರ್ಮದೇವನನ್ನು ಆದಷ್ಟು ಶೀಘ್ರವಾಗಿ ಸಂದರ್ಶಿಸಬೇಕೆಂಬ ಆಕಾಂಕ್ಷೆಯೇ ಪ್ರೇಮಾಯತನದ ತಾಯಿ. ಆದ್ದರಿಂದಲೇ ಆಶ್ರಮಕ್ಕೆ ಮಮತೆಯ ಮನೆ ಅಥವಾ ಪ್ರೇಮಾಯತನವೆಂದು ಹೆಸರು. ಪ್ರೇಮ ಧರ್ಮಾಮೃತವನ್ನು ಸವಿಯಬೇಕೆಂಬ ಸದಿಚ್ಛೆ ಇರುವ ಸ್ತ್ರೀ ಪುರುಷರು ಆ ಬಾಲ-ವೃದ್ಧರನ್ನು ಜಾತಿ ಜನಾಂಗದ ಭೇದವಿಲ್ಲದೆ ಪ್ರೇಮಾಯತನವು ಸ್ವಾಗತಿಸುತ್ತದೆ." ಹೀಗೆ ಆಶ್ರಮದಲ್ಲಿ ಯಾವ ಜಾತಿಯ ಭಾವನೆಗಳಿಗೆ ಆಸ್ಪದವಿರಲಿಲ್ಲ ವಿಶ್ವವಿದ್ಯಾಲಯೋಪಾದಿಯಲ್ಲಿ ಅದು ಕೆಲಸ ಮಾಡುತ್ತಲಿತ್ತು.

ರೋಗಿಗಳನ್ನು ಪ್ರೇಮ ಭಾವನೆಯಿಂದ ಉಪಚರಿಸುತ್ತಿದ್ದರು. "ರೋಗಿಗಳೇ ದೇವರು" ಎಂಬ ಉದಾತ್ತ ಕಲ್ಪನೆಯನ್ನು ಸಾರ್ಥಕಗೊಳಿಸಿದ್ದರು. ಪ್ರೇಮ ಭಾವನೆಯ ಬಗೆಗೆ ಮತ್ತೊ ಹೇಳಿದ್ದೇನಂದರೆ:

"ಪ್ರೇಮದ ಲಕ್ಷಣವಾದ ಐಕ್ಯ ಆಕರ್ಷಣೆಗಳಿಗೆ ಸಮ ರಸವೇ ಅಡಿಗಲ್ಲು. ಪ್ರೇಮದ ಸಮರಸಗಾನವೇ ಗುರು ಗೀತೆ. ಪ್ರೇಮವೇ ರಾಮಕೃಷ್ಣ, ಜಗನ್ಮಾತೆ, ಪ್ರೇಮವೇ ರೀತಿ, ಪ್ರೇಮವೇ ನೀತಿ, ಪ್ರೇಮಕ್ಕೆ ಇಹದಲ್ಲಿ ಯೋಗ್ಯ ಕೀರ್ತಿ, ಪ್ರೇಮಕ್ಕೆ ಆತ್ಮ ಪ್ರತೀತಿ"

ಆಶ್ರಮವು ಸ್ಥಾಪನೆಯಾದ ಮೇಲೆ ಮೂರು ವರ್ಷ ಗಳಲ್ಲಿಯೇ ಸುಮಾರು ೧೬,೦೦೦ ರೋಗಿಗಳನ್ನು ಚಿಕಿತ್ಸೆ ಮಾಡಿದರು. ಕರ್ನಾಟಕದ ರೋಗಿಗಳಲ್ಲದೆ ಮುಂಬಯಿ, ಮದ್ರಾಸ, ಜೋಧಪುರ ಮುಂತಾದ ಕಡೆಗಳಿಂದ ರೋಗಿಗಳು ಬಂದು ಪ್ರೇಮಪೂರ್ವಕ ಚಿಕಿತ್ಸೆಯನ್ನು ಹೊಂದಿ ಗುಣವಾದ ಬಳಿಕ ಹೋಗುತ್ತಿದ್ದರು. ಹೀಗೆ ಪಂ. ತಾರಾನಾಥರ ಕಾರ್ಯ ಕ್ಷೇತ್ರ ಕರ್ನಾಟಕ, ತಮಿಳುನಾಡಿನ ಕೆಲವು ಭಾಗಗಳು ಮತ್ತು ದೇಶದ ಇತರ ಪ್ರಾಂತಗಳಿಗೆ ವಿಸ್ತಾರಗೊಂಡಿತು.

"ಪ್ರೇಮ ವಿದ್ಯಾಪೀಠ" ಆಶ್ರಯದಲ್ಲಿ "ಪ್ರೇಮ ಮೆಡಿಕಲ್ ಕಾಲೇಜ"ನ್ನು ಪ್ರಾರಂಭಿಸಿದರು. ಬಳವಂತರಾವ ದೀಕ್ಷಿತ, ಸ್ವಾಮಿ ರಾಮಾಚಾರ್ಯ ಗುಂಡೂರಾವ್ ಮುಂತಾ ದವರು ಕಾಲೇಜಿನ ಆರಂಭದ ದಿನಗಳಲ್ಲಿ ವಿದ್ಯಾರ್ಥಿಗಳಾಗಿ ದ್ದರು ಆಯುರ್ವೇದ, ಹೋಮಿಯೋಪತಿ, ಬಾಯೋಕೆಮಿಸ್ಟ್ರಿ ಶರೀರೋತ್ಕರ್ಷ, ಸಾಹಿತ್ಯ, ವೇದಾಂತ, ಕಲೆ ಮುಂತಾದ ವಿಷಯಗಳನ್ನು ಕಲಿಸುವ ಏರ್ಪಾಡನ್ನು ಕಾಲೇಜಿನಲ್ಲಿ ಒದ

ಗಿಸಿದ್ದರು. ಇದಕ್ಕಿಂತಲೂ ಹೆಚ್ಚಾಗಿ ಮನುಷ್ಯನಿಗೆ ಉಪಯೋಗವಾಗುವ "ಚಿಕಿತ್ಸಿನ್" ವಿದ್ಯೆಯನ್ನು ಕಲಿಸುವ ಏರ್ಪಾಡು ಮಾಡಿದ್ದರು. ಈ ಶಿಕ್ಷಣವನ್ನು ಅಂಚೆಯ ಮೂಲಕ ಕೊಡಲಾಗುತ್ತಿತ್ತು. ಈ ರೀತಿ ಕಲಿಯಲಿಚ್ಛಿಸುವವರು ನಿರ್ದಿಷ್ಟ ಪಡಿಸಿದ ಫೀಗಿಂತ ಅರ್ಧ ಭಾಗವನ್ನು ಕೊಡಬಹುದಾಗಿತ್ತು. ಸ್ತ್ರೀಯರಿಗೆ ಯಾವ ಫೀಯನ್ನು ಆಕರಿಸುತ್ತಿದ್ದಿಲ್ಲ. ಈ ವ್ಯವಸ್ಥೆಯಿಂದ ಅನೇಕ ಜನ ನಿರುದ್ಯೋಗಿಗಳಿಗೆ ಶಿಕ್ಷಣಾನಂತರದಲ್ಲಿ ತಮ್ಮ ಉದರನಿರ್ವಹಣೆಯನ್ನು ಸಾಗಿಸಲು ಸಹಾಯವಾಯಿತು. ಬೋಧನೆಗಳನ್ನು ಮಾಡಲಿಕ್ಕೆ ಅನೇಕ ಜನ ವೈದ್ಯರನ್ನು ನೇಮಿಸಿದರು. ಆಶ್ರಮದ ಕಾರ್ಯಭಾರ ದಿನೇ ದಿನೇ ಹೆಚ್ಚಾಯಿತು. ಒಮ್ಮೆ ತಾರಾನಾಥರು ತಮ್ಮ ಸಹೋದರ ಸಹೋದರಿಯರಿಗೆ ಈ ರೀತಿ ಪತ್ರ ಬರೆದರು:

"ಆಶ್ರಮವನ್ನು ನಿಜವಾಗಿ ಪ್ರೀತಿಸುತ್ತಿದ್ದರೆ ಆಶ್ರಮದ ಕಾರ್ಯವೇ ನಿಮ್ಮ ಉಪಾಸನೆಯಾಗಲಿ".

ಆಶ್ರಮದ ವ್ಯವಸ್ಥಾಪಕರಾಗಿ ಸಹೋದರ ಅಮೃತರಾಯರನ್ನು ನೇಮಿಸಿದ ಮೇಲೆ ಪಂ. ತಾರಾನಾಥರಿಗೆ ಕಾರ್ಯದ ಒತ್ತಡ ಸ್ವಲ್ಪ ಮಟ್ಟಿಗೆ ಕಡಿಮೆಯಾದಂತಾಯಿತು.

೯. "ಪ್ರೇಮ" ಪತ್ರಿಕೆ

೧೯೨೧ರ ತರುವಾಯ ಕರ್ನಾಟಕದ ಕ್ಷೇತ್ರದಲ್ಲಿ ಸಾಂಸ್ಕೃತಿಕ ಪುನರುಜ್ಜೀವನಗೊಳಿಸಲು ತಮ್ಮ ಎಲ್ಲ ಶಕ್ತಿಯನ್ನು ವಿನಿಯೋಗಿಸಿದರು. ಸಾಮಾಜಿಕ ಕ್ರಾಂತಿಯಲ್ಲಿ ವಿಶ್ವಾಸವಿದ್ದವರಾದ್ದರಿಂದ ತಮ್ಮ ಎಲ್ಲ ಶಕ್ತಿಯನ್ನು ಆ ಉದ್ದೇಶ ಸಾಧನೆಗಾಗಿಯೇ ಮೀಸಲಾಗಿಟ್ಟರು. "ಪ್ರೇಮ" ಎಂಬ ನಿಯತಕಾಲಿಕ ಲೇಖನ ಸಂಗ್ರಹದ ಪ್ರಕಟನೆಯನ್ನು ಇಂಗ್ಲೀಷ ಮತ್ತು ಕನ್ನಡದಲ್ಲಿ ಪ್ರಾರಂಭಿಸಿದರು. ಅದರ ಮುಖಾಂತರ ತಮ್ಮ ಉತ್ತೇಜಕ ಸಂದೇಶಗಳನ್ನು ಪ್ರಕಟಿಸಿ ದೇಶದ ಈ ಬಾಗದಲ್ಲಿ ಜನಜಾಗ್ರತಿಗೈದರು. ಜ್ಞಾನಾಭಿವೃದ್ಧಿಯನ್ನು ಹೆಚ್ಚಿಸುವ ಲೇಖನಗಳನ್ನು ಪ್ರಕಟಿಸುವದಕ್ಕೂ ವೈದ್ಯ ಶಾಸ್ತ್ರದಲ್ಲಿನ ಸುಲಭ ಚಿಕಿತ್ಸೆಗಳನ್ನು ಪ್ರಕಟಿಸುವ ಉದ್ದೇಶದಿಂದಲೂ ಈ ಪತ್ರಿಕೆಯನ್ನು ಹೊರಡಿಸಿದರು. ಕನ್ನಡ ನಾಡಿನ ಲೇಖಕರ ಉನ್ನತ ಮಟ್ಟದ ಲೇಖನಗಳು ಇದರಲ್ಲಿ ಪ್ರಕಟವಾಗುತ್ತಿದ್ದವು. ಇದಲ್ಲದೆ "ತಾಯಂದಿರಿಗೆ" ಅನ್ನುವ ಪತ್ರಗಳ ಸಂಕಲನದಲ್ಲಿ ಮಕ್ಕಳ ಸಮಸ್ಯೆಗಳನ್ನು ಸರಳ ಭಾಷೆಯಲ್ಲಿ ಬರೆಯುಲಾಗಿದೆ. ಅವರು ಮನ ಬಿಚ್ಚಿ ಹೇಳಿದ ಕೆಲವು ಮಾತುಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ:

"ಮಕ್ಕಳ ಆಹಾರ ವ್ಯವಹಾರಗಳು ಆರೋಗ್ಯ ಶಾಸ್ತ್ರವನ್ನು ಅನುಸರಿಸಿಯೇ ಇರಬೇಕು. ಮಕ್ಕಳಿಗೆ ಸ್ವೇಚ್ಛೆಯಾಗಿ ತಿಂಡಿಯನ್ನುಣಿಸುವದೇ ಆರೈಕೆ ಅಥವಾ ಪ್ರೀತಿಯ ಲಕ್ಷಣವೆಂದು ಅನೇಕ ಮೂರ್ಖ ತಾಯಂದಿರ ಅಭಿಪ್ರಾಯ. ಇಂತಹ ದುರಭಿಪ್ರಾಯದಿಂದ ಎಷ್ಟೋ ಮಕ್ಕಳು ವೃಥಾ ರೋಗಪೀಡಿತರಾಗಿ ಸತ್ತು ಹೋಗುತ್ತವೆ."

ಭಾರತೀಯ ತಾಯಂದಿರು ಮಕ್ಕಳ ಆರೋಗ್ಯವನ್ನು ಕಾಪಾಡುವಲ್ಲಿ ಯಾವ ರೀತಿ ಎಚ್ಚರಿಕೆ ವಹಿಸಬೇಕು ಮತ್ತು ಮಕ್ಕಳ ನಿಜವಾದ ಸುಖದ ಮರ್ಮವನ್ನು ತಿಳಿದವಳೇ ನಿಜವಾದ ತಾಯಿಯಾಗುತ್ತಾಳೆ. ಎಂದು ಹೇಳಿದ್ದಾರೆ

ತಂದೆ ತಾಯಿಗಳು ಧರ್ಮಾನುಸಾರ ನಡೆಯಬೇಕು. ಅಂಥ ತಂದೆ-ತಾಯಿಗಳಿಂದ ಲೋಕ ಕಲ್ಯಾಣ ಮಾಡುವಂಥ ಮಕ್ಕಳು ಹುಟ್ಟುವರು.

"ಶುದ್ಧ ಧರ್ಮಾತ್ಮರಾದ ಜಿತೇಂದ್ರಿಯರಾದ ತಾಯಿ ತಂದೆಗಳಿಗೆ ಪರಿಪೂರ್ಣರಾದ ವಿಭೂತಿ ಪುರುಷರೇ ಹುಟ್ಟುತ್ತಾರೆಂದು ಹಿರಿಯರ ಮತ. ಇಂತಹ ಸಂತತಿಯನ್ನು ಹುಟ್ಟಿಸುವವರೇ ಭಾಗ್ಯವಂತರು. ಭಗವಾನ್ ಶ್ರೀ ರಾಮಕೃಷ್ಣ, ಮಹಾತ್ಮರಾದ ವಿವೇಕಾನಂದ, ಶ್ರೀ ರಾಮತೀರ್ಥ, ತಿಲಕ, ಗಾಂಧಿ ಮುಂತಾದವರ ತಾಯಿ ತಂದೆಗಳು

ಎಷ್ಟು ಧನ್ಯರು. ತಮ್ಮ ಮಕ್ಕಳಿಂದ ಉಪಕಾರ ಹೊಂದಿದ ಜಗತ್ತಿನಲ್ಲಿ ಅವರುಗಳಿಗೆ ಆಚಂದ್ರಾರ್ಕ ಕೀರ್ತಿ"

ಧನ ಇದ್ದವರೇ ಧನಿಕರು ಅನ್ನುವ ಮಾತು ಸತ್ಯವಲ್ಲ. ಜ್ಞಾನವು ಬಾಲ್ಯದಿಂದ ಬೆಳೆಯುತ್ತ ಹೋದರೆ ಜ್ಞಾನವೇ ಧನದ ನಿಧಿಯಾಗುತ್ತದೆ. ಈ ನಿಧಿಯು ಬೆಳೆಯುತ್ತ ಹೋದರೆ ಈ ನಮ್ಮ ದೇಶದಲ್ಲಿ ಮೂರ್ಖರಿಗೆ ರೋಗಿಗಳಿಗೆ ಮತ್ತು ಆಲಸಿಗಳಿಗೆ ಸ್ಥಾನವಿಲ್ಲ ಎಂಬ ಎಚ್ಚರಿಕೆಯ ನುಡಿಯನ್ನು ತಾಯಂದಿರಿಗೆ ಕೊಟ್ಟಿದ್ದಾರೆ.

"ಅನೇಕ ಧನಿಕರ ನೀಚಲಾಲನೆಯಿಂದ ಈ ದೇಶದಲ್ಲೀಗಲೂ ಅನೇಕ ಮೂರ್ಖರೂ, ರೋಗಿಗಳೂ ಮತ್ತು ಆಲಸ್ಯ ಮೂರ್ತಿಗಳೂ ಕಂಡು ಬರುತ್ತಾರೆ."

ಬೀಜವೃಕ್ಷ ನ್ಯಾಯದಂತೆ ನಾಳಿನ ನಾಗರಿಕರಾಗುವ ಇಂದಿನ ಬಾಲಕರಲ್ಲಿ ಮತ್ಸರವೃಕ್ಷದ ಬೀಜವನ್ನು ಹಿರಿಯರೇ ಬಿತ್ತುವರೆಂಬ ಅವರ ಮಾತುಗಳಲ್ಲಿ ನೈತಿಕ ಧೈರ್ಯ ಸ್ಥೈರ್ಯ ತುಂಬಿದೆ. ತನ್ನದೆಲ್ಲವೂ ಇತರರದು. ಇತರರದೆಲ್ಲವೂ ತನ್ನದೆಂದು ಹೇಳುವದು ವಿವೇಕದ ಲಕ್ಷಣವೆಂದೂ ಮತ್ತು "ಪರೋಪಕಾರಾಯಮಿದಂ ಶರೀರಂ" ಎಂಬ ಬೀಜವನ್ನು ನೆಟ್ಟಂತಾಗುವದೆಂದೂ ತಿಳಿಸಿದ್ದಾರೆ. ಅನ್ನ, ಜ್ಞಾನ, ಮಾನಗಳನ್ನು ಹಂಚಿ ತಿನ್ನಬೇಕೆಂದು ಮಕ್ಕಳಿಗೆ ಕಲಿಸಿ

ದರೆ ಸ್ವಾರ್ಥ, ಮದ, ಮತ್ಸರಗಳು ತಂತಾನೆ ಮಾಯವಾಗಿ ದೇಶಕ್ಕೆ ಸುಕಾಲವಾಗುವದು.

"ಎಲ್ಲ ದುರ್ಗುಣಗಳಿಗಿಂತ ಕೆಟ್ಟ ಗುಣವು ಹೊಟ್ಟೆಕಿಚ್ಚು. ನಮ್ಮ ಭಾರತದಲ್ಲಿಯಂತೂ ಈಗ ಈ ದುರ್ಗುಣದ ಸಂತೆಯೇ ಆಗಿದೆ. ಇದರಿಂದಲೇ ದೇಶಕ್ಕೆ ದುರ್ಭಿಕ್ಷೆ, ಧರ್ಮದ ಅಲಕ್ಷ್ಯ ಅಜ್ಞಾನ ಇತ್ಯಾದಿಗಳು".

ಜ್ಞಾನವನ್ನು ಎಷ್ಟೇ ಸಂಪಾದಿಸಿದರೂ ಮನುಷ್ಯನು ನಿಗರ್ವಿಯಾಗಬೇಕು. ಅಹಂಭಾವದಿಂದ ಜ್ಞಾನವು ಕಡಿಮೆಯಾಗುತ್ತದೆ. ಜ್ಞಾನ ದಾಸೋಹದಿಂದ ಧಾರ್ಮಿಕ ಗುಣಗಳು ಹೆಚ್ಚುತ್ತವೆ. ಕಾರಣ ಈ ಗುಣಗಳನ್ನು ತಂದೆತಾಯಿಗಳು ಬೆಳೆಸಿಕೊಂಡರೆ ಈ ಅದ್ಭುತ ಗುಣಗಳ ಪ್ರಭಾವದಿಂದ ಶೂರರಾದ ಮಕ್ಕಳು ಹುಟ್ಟುತ್ತಾರೆ. ಬೆಳಕಿನಿಂದ ಕತ್ತಲೆಯು ಮಾಯವಾಗುವಂತೆ ಜ್ಞಾನದ ಅಹಂಭಾವವಳಿದು ಸದ್ಗುಣಗಳ ಖಣಿಯಾಗುವನೆಂದು ತಿಳಿಸಿದ್ದಾರೆ.

"ನಾನು ಎಲ್ಲವನ್ನೂ ತಿಳಿದುಕೊಂಡೆನು ಎಂದು ಹೇಳುವಂಥವನಿಗಿಂತ ಕಡು ಮೂರ್ಖನು ಇಲ್ಲ."

ಮನುಷ್ಯ ಮತ್ತು ಪ್ರಾಣಿಗಳಿಗೆ ಇರುವ ಅಂತರ ವಿಚಾರಶೀಲತೆ. ಇದು ಇಲ್ಲದಿದ್ದರೆ ಮನುಷ್ಯ ಮತ್ತು ಪ್ರಾಣಿಗಳಲ್ಲಿ ಅಂತರವೇ ಇಲ್ಲ ಅದರಂತೆ ದಾನದ ಆಚರಣೆಯೂ ಮುಖ್ಯ. ಇದರಿಂದ ಸಮಾಜಕ್ಕೆ ಎಷ್ಟೋ ಗುಣವಾಗುವ

ದೆಂದು, ಶ್ರೇಷ್ಠ ಗುಣವಾದ ದಾನವನ್ನು ಮಕ್ಕಳಿಗೆ ಕಲಿಸ ಬೇಕೆಂದು ತಾಯಂದಿರಿಗೆ ಸೂಚಿಸಿದ್ದಾರೆ. ಯಾವ ತಾಯಿ ಈ ಗುಣವನ್ನು ಮಕ್ಕಳಿಗೆ ಕಲಿಸುತ್ತಾಳೋ ಅವಳೇ ನಿಜವಾದ ತಾಯಿ ಎಂಬ ಶುಭ ನಾಮಕ್ಕೆ ಅರ್ಹಳಾಗುವಳು ಎಂದಿದ್ದಾರೆ;

"ಪಶುಗಳಿಗೂ ಮನುಷ್ಯರಿಗೂ ಇರುವ ಗುಣ ವ್ಯತ್ಯಾಸಗಳಲ್ಲಿ ಈ ದಾನವೆಂಬುದು ಮುಖ್ಯವಾದದ್ದು."

ಆರೋಗ್ಯಕ್ಕಿಂತ ಬೇರೆ ಭಾಗ್ಯವಿಲ್ಲ ಮನೆಯಲ್ಲಿ ಸ್ವಚ್ಛತೆಯಿದ್ದರೆ ಮಾತ್ರ ಆರೋಗ್ಯ ಸಾಧ್ಯ. ಇದನ್ನು ಹಿರಿಯರು ಕಿರಿಯರಿಗೆ ಆಚರಿಸಿ ತೋರಿಸಬೇಕು. ಉದಾ: ಕೆಲವು ಹೆಂಗಸರು ಮಕ್ಕಳ ಮಲಮೂತ್ರಗಳನ್ನು ಕೈಯಿಂದ ಸಾರಿಸಿ ಅಲ್ಲಿಯೇ ನೆಲದ ಮೇಲೆ ಒಣಗಿಸಿ ಕೈಯನ್ನು ಸೀರೆಗೆ ಒರೆಸಿಕೊಳ್ಳುತ್ತಾರೆ. ಯುರೋಪ ಖಂಡದ ತಾಯಂದಿರು ಸ್ವಚ್ಛತೆಯನ್ನು ತಮ್ಮ ಮಕ್ಕಳಿಗೆ ಚೆನ್ನಾಗಿ ಕಲಿಸುತ್ತಾರೆ. ಆದ್ದರಿಂದ ಭಾರತೀಯ ತಾಯಂದಿರು ತಮ್ಮ ಮಕ್ಕಳಿಗೆ ಸ್ವಚ್ಛತೆಯನ್ನು ಕಲಿಸಬೇಕು. ಸ್ವಚ್ಛತೆ ಇದ್ದಲ್ಲಿ ದೇವರು ನೆಲಿಸುವನು. ಕಾರಣ ವಾಸ ಸ್ಥಾನವು ದೇವಸ್ಥಾನವಾಗಬೇಕಾದರೆ ಅಲ್ಲಿ ಸ್ವಚ್ಛತೆಯನ್ನು ಕಾಪಾಡಿ ವಾತಾವರಣವನ್ನು ಪವಿತ್ರವಾಗುವಂತೆ ಮಾಡಬೇಕೆಂದು ಹೇಳಿದ್ದಾರೆ:

"ಸ್ವಚ್ಛತೆಯು ವಸ್ತುವನ್ನು ಆಕರ್ಷಕವಾಗಿ ಮಾಡುವದಷ್ಟೇ ಅಲ್ಲದೆ ಮನೆಯಲ್ಲಿ ಕೊಳಕು ಇಲ್ಲದಂತೆ ಮಾಡಿ ಹವೆಯನ್ನು ಶುದ್ಧವಾಗಿಟ್ಟು ಪರಿಸ್ಥಿತಿಯನ್ನು ಆರೋಗ್ಯದಾಯಕವಾಗಿ ಮಾಡುವದು".

ಮನುಷ್ಯನ ಪ್ರೀತಿಯು ಸಹಜಸುಂದರವಾಗಿರಬೇಕು. ಮಗು ಅತ್ತಾಗ ತಾಯಿ ಮೊಲೆಹಾಲು ಉಣಿಸಬೇಕು. ಅಳದಿದ್ದಾಗ ಆ ಎಳೆ ಮಗುವಿಗೆ ಅದರ ಹೊಟ್ಟೆಯನ್ನು ತುಂಬಿಸುವದೆಂದರೆ ಮಕ್ಕಳಿಗೆ ಹಿಂಸೆಯನ್ನು ಕೊಟ್ಟಂತೆಯೇ ಎಂದು ಭಾವಿಸಬೇಕು. ಮಕ್ಕಳನ್ನು ಮಹಾನುಭಾವರನ್ನಾಗಿ ಮಾಡುವ ಪ್ರೀತಿಯನ್ನು ತಾಯಂದಿರು ಕಲಿತುಕೊಳ್ಳಬೇಕೆಂದೂ ಅಜ್ಞಾನದ ಪ್ರೀತಿಯನ್ನು ತೊಡೆದು ಹಾಕಬೇಕೆಂದೂ ತಿಳಿಸಿದ್ದಾರೆ

"ಪ್ರೀತಿಯು ಪರಮಾತ್ಮನ ಪ್ರತಿಬಿಂಬವೇ ಸರಿ; ಆದರೆ ಯಾವದೆ ಒಂದು ರೂಪವು ಎಷ್ಟು ಸೊಗಸಾಗಿದ್ದರೂ ಕನ್ನಡಿಯು ಕೊಳಕಾಗಿದ್ದರೆ ಪ್ರತಿಬಿಂಬವು ವಿಕಾರವಾಗಿಯೇ ಕಾಣುತ್ತದೆ."

ಮನುಷ್ಯನು ಒಂಟಿಯಾಗಿ ಬಾಳಲಾರನು. ಅವನು ಸಮಾಜ ಜೀವಿ. ಸಮಾಜ ಜೀವಿಯಾಗಲು ಸಾಧ್ಯವಾಗದೇ ಹೋದರೆ ಅವನು ದೇವರು ಅಥವಾ ಪಶುವೆಂದೆನಿಸಿಕೊಳ್ಳುವನು ಕಾರಣ ಚಿಕ್ಕಂದಿನಿಂದ ಮಕ್ಕಳಿಗೆ ತಾಯಂದಿರು

ಸಮಾಜದಲ್ಲಿರತಕ್ಕ ಜನರ ಸಹವಾಸವನ್ನು ಮಾಡಿಸಲಿಕ್ಕೆ ಕಲಿಸಬೇಕು. ಸಹವಾಸ ಹೆಚ್ಚಿದಷ್ಟೂ ಅವನು ಸುಖಿಯಾಗುತ್ತಾನೆ. ಆದ್ದರಿಂದ ಮಕ್ಕಳು ಆಕರ್ಷಕ ವ್ಯಕ್ತಿತ್ವವನ್ನು ಪಡೆದುಕೊಂಡು ಸಹವಾಸವನ್ನು ಬಲಪಡಿಸುವ ಪ್ರಯತ್ನವನ್ನು ಮಾಡುವ ಮನೋಪ್ರವೃತ್ತಿಯನ್ನು ತಾಯಂದಿರು ಮಾಡಬೇಕೆಂಬುದನ್ನು ಸೋದಾಹರಣವಾಗಿ ತಿಳಿಸಿದ್ದಾರೆ;

"ಮನುಷ್ಯನು ಸಾಮಾಜಿಕ ಜೀವಿಯೆಂಬುದು ನಿಮಗೆ ಗೊತ್ತೇ ಇರಬೇಕು ಅವನು ಸಂಘವನ್ನು ಬಿಟ್ಟು ಕಾಡಿನಲ್ಲಿ ವಾಸ ಮಾಡುವದಿಲ್ಲ. ಅವನಿಗೆ ಬಂಧು ಬಾಂಧವರು ಬೇಕು, ಇಷ್ಟಮಿತ್ರರು ಬೇಕು"

ಸ್ವಾಮಿ ವಿವೇಕಾನಂದರು ಭಾರತೀಯರಿಗೆ ಪಾಶ್ಚಾತ್ಯರ ಅನುಕರಣ ಮಾಡದಿರಲೆಂಬ ಮಹತ್ವದ ಸಂದೇಶವನ್ನು ಕೊಟ್ಟಿದ್ದಾರೆ. ಭಾರತವು ಪಾಶ್ಚಿಮಾತ್ಯರಿಗೆ ಕೊಡುವದು ಬೇಕಾದಷ್ಟಿದೆ. ಹೀಗೆ ವಿವೇಕಾನಂದರು ಅಭಿಪ್ರಾಯ ಪಡುವದರಿಂದ ಪಾಶ್ಚಿಮಾತ್ಯರ ಸಂಸ್ಥೆಗಳನ್ನು ನಿಂದಿಸಿದರೆಂದಲ್ಲ. ಅವು ಅವರಿಗೆ ಇಷ್ಟವಾದವುಗಳು, ನಮಗೆ ಸರಿಹೊಂದತಕ್ಕವುಗಳಲ್ಲ ಎಂಬ ಮಾತನ್ನು ಒತ್ತಿ ಹೇಳಿದ್ದಾರೆ. ಅದರಂತೆ ಪಂ. ತಾರಾನಾಥರು ನಾಗರಿಕತೆಯ ತತ್ತ್ವವನ್ನು ಅರಿತುಕೊಂಡು ಭಾರತೀಯರು ನಿಜವಾದ ನಾಗರಿಕರೆನಿಸಿಕೊ

ಳ್ಳಬೇಕು. ಪಾಶ್ಚಿಮಾತ್ಯರ ಅನುಕರಣ ಮಾಡುವ ಭಾರತೀಯರು ಟೊಳ್ಳು ನಾಗರಿಕರು, ದುರ್ಬಲ ಮಾನವರು, ಜೀವನ ಸಂಗ್ರಾಮದಲ್ಲಿ ಸೋಲುವರು. ವ್ಯಕ್ತಿತ್ವವು ಬೆಳೆಯುವಂಥ ಅನುಕರಣವನ್ನು ಮಾಡಲಿಕ್ಕೆ ತಾಯಂದಿರು ಮಕ್ಕಳಿಗೆ ಕಲಿಸಿ ಕೊಡಬೇಕು. ಇದನ್ನು ಅರಿಯದವರು ನಾಗರಿಕರು ಅಲ್ಲ ಅನ್ನುವ ಅಭಿಪ್ರಾಯವನ್ನು ಪಂ ತಾರಾನಾಥರು ಕೊಟ್ಟಿದ್ದಾರೆ.

"ಸೊಗಸು ಎಂಬ ಶಬ್ದವು ನಿಮ್ಮೆಲ್ಲರಿಗೂ ಗೊತ್ತಿದೆ. ಆದರೆ ಅದರ ನಿಜವಾದ ವ್ಯಾಖ್ಯೆಯು ಅನೇಕರಿಗೆ ತಿಳಿದಿದೆಯೆಂದು ನಾನು ನಂಬಲಾರೆ. ಸಾಮಾನ್ಯರಿಗೆ ಸೊಗಸು ಎಂದರೆ ಹತ್ತು ಜನರು ಮಾಡಿದ್ದು. ಆದರೆ ಆ ಹತ್ತು ಜನರು ಬುದ್ಧಿವಂತರೋ ಮೂರ್ಖರೋ ಎಂಬುದನ್ನು ನೋಡುವವರು ಬಹಳ ಕಡಿಮೆ."

ತಂದೆ ತಾಯಿಗಳು ಮೊದಲು ಪಾಪ-ಪುಣ್ಯ, ಒಳ್ಳೆಯದು ಕೆಟ್ಟದ್ದು ಎಂಬ ಪದಗಳ ತತ್ತ್ವವನ್ನು ಸರಿಯಾಗಿ ತಿಳಿದು ಕೊಳ್ಳಬೇಕು. ತತ್ತ್ವ ಮತ್ತು ರೂಢಿಯಲ್ಲಿ ಹೊಂದಾಣಿಕೆಯಿಲ್ಲದಿದ್ದರೆ ಪಾಪ ಮತ್ತು ಪುಣ್ಯಗಳ ಪರಿಜ್ಞಾನವು ಅಡಗುವದು. ಇದರಿಂದ ಅನೇಕ ಅನಾಹುತಗಳಾಗುತ್ತವೆ. ಪಾಪ ಮತ್ತು ಪುಣ್ಯಗಳ ಪದಗಳ ಅರ್ಥವನ್ನು ಮೊದಲು ತಂದೆ ತಾಯಿಗಳು ಅರ್ಥೈವಿಸಿಕೊಂಡು ನಂತರ ಮಕ್ಕಳಿಗೆ ಕಲಿಸಬೇಕೆಂದು ಪಂ. ತಾರಾನಾಥರು ಹೇಳಿದ್ದಾರೆ.

"ಪಾಪ ಪುಣ್ಯ, ಒಳ್ಳೆಯದು ಕೆಟ್ಟದ್ದು ಮುಂತಾದ ಈ ಶಬ್ದಗಳು ನಿಮಗೆಲ್ಲರಿಗೂ ಗೊತ್ತು. ಪಾಪವು ಕೆಟ್ಟದ್ದು ಎಂಬುವು ನಿಮಗೆಲ್ಲರಿಗೂ ತಿಳಿದ ಮಾತೇ ಆಗಿದೆ. ಆದರೆ ಪಾಪ ವೆಂದರೇನು—ಪುಣ್ಯವೆಂದರೇನು ಎಂಬುದನ್ನು ಕುರಿತು ನಿಮ್ಮ ಲ್ಲನೇಕರು ವಿಚಾರಿಸಿರಲಿಕ್ಕಿಲ್ಲ."

ಹೀಗೆ ಪಂ. ತಾರಾನಾಥರು "ತಾಯಿಂದಿರಿಗೆ" ಎಂಬ ಪತ್ರಲೇಖನದಲ್ಲಿ ಮಕ್ಕಳ ಸಮಸ್ಯೆಗಳನ್ನು ಸರಳ ಸುಂದರ ಭಾಷೆಯಲ್ಲಿ ಬರೆಯುತ್ತಿದ್ದರು. ಅನೇಕ ವಿದ್ಯಾರ್ಥಿಗಳ ಪತ್ರ ಗಳಿಗೆ "ಪ್ರೇಮ" ಪತ್ರಿಕೆಯ ಮುಖಾಂತರ ಉತ್ತರಿಸು ತ್ತಿದ್ದರು. ಸಣ್ಣ ಮಕ್ಕಳೆಂದರೆ ಪಂ ತಾರಾನಾಥರಿಗೆ ಬಹಳ ಪ್ರೀತಿ. "ಪ್ರೇಮ" ಪತ್ರಿಕೆಯ ೨೭-೧೨-೧೯೨೪ ರ ಸಂಚಿಕೆ ಯಲ್ಲಿ ಹೀಗೆ ಪ್ರಕಟಿಸಿದ್ದಾರೆ:

"ಆಶ್ರಮಕ್ಕೆ ಆರುಮಂದಿ ಅನಾಥ ಬಾಲಕರು ಬೇಕು. ಅನ್ನ ವಿದ್ಯೆ ಎಲ್ಲವೂ ಕೊಡಲ್ಪಡುವವು".

ಅನಾಥ ಮಕ್ಕಳಿಗೆ ಆಶ್ರಮದಲ್ಲಿ ಹೆಚ್ಚಿನ ಪ್ರಾಶ ಸ್ತ್ಯವನ್ನು ಕೊಟ್ಟರು "ದಾಂಪತ್ಯ ದರ್ಶನ" ಎಂಬ ಲೇಖನ ಮಾಲೆಯನ್ನು ಪಂ. ತಾರಾನಾಥರು ಪ್ರಾರಂಭಿಸಿದರು. ಅದರಲ್ಲಿ ರೋಗದ ಲಕ್ಷಣಗಳಾವವು? ಅವುಗಳ ನಿವಾರಣೆ ಏನು? ಎಂಬ ವಿಷಯಗಳ ಮೇಲೆ ಪತ್ರಿಕೆಯಲ್ಲಿ ಚೆನ್ನಾಗಿ ವಿವೇಚಿ

ಸಿದ್ದಾರೆ. "ಪ್ರೇಮ" ಪತ್ರಿಕೆಯು ಮೊದಮೊದಲು ತ್ರೈಮಾಸಿಕ ಪತ್ರಿಕೆಯಾಗಿ ಹೊರಡುತ್ತಿತ್ತು. ಅದರ ಜನಪ್ರಿಯತೆ ಹೆಚ್ಚಿದ ಮೇಲೆ ಅದನ್ನು ತಿಂಗಳಿಗೊಮ್ಮೆ ಹೊರಡಿಸಲಾಯಿತು.

"ಹೀಗೆ ಪಂ. ತಾರಾನಾಥರು ತುಂಗಭದ್ರಾ ದಡದ ಮೇಲೆ ಪ್ರೇಮಾಯತನ ಎಂಬ ಆಶ್ರಮವನ್ನು ತೆಗೆದು ಅಲ್ಲಿ ಆಯುರ್ವೇದೀಯ ಚಿಕಿತ್ಸಾಲಯವನ್ನು ಪ್ರಾರಂಭಿಸಿ ಅಲ್ಲಿಂದಲೇ "ಪ್ರೇಮ" ಎಂಬ ಮಾಸಿಕ ಪತ್ರಿಕೆಯನ್ನು ಹೊರಡಿಸಿ ಆ ದಿಸೆಯಲ್ಲಿ ಅವರು ಜನತೆಗೆ ಬಹು ದೊಡ್ಡ ಸೇವೆಯನ್ನು ಸಲ್ಲಿಸಿದರು. ೧೯೨೧ರ ನಂತರ ಅವರ ಆಶ್ರಮವು ಕರ್ನಾಟಕದಲ್ಲಿಯೇ ರಾಜಕೀಯ ಕಾರ್ಯಕರ್ತರಿಗೆ ಆಶ್ರಯ ಸ್ಥಾನವಾಯಿತು. ಗುಪ್ತ ಕಾರ್ಯಕರ್ತರೂ ಸಹ ಇವರ ಸಂಪರ್ಕವಿಟ್ಟುಕೊಂಡಿದ್ದರು. ಇವರ ಆಶ್ರಮದಲ್ಲಿ ಬಾಂಬ ತಯಾರುಮಾಡುವರೆಂದು ಸರಕಾರಕ್ಕೆ ಸಂಶಯ ಬಂದಿತು. ೧೯೪೨ರಲ್ಲಿ ಆ ಆಶ್ರಮವನ್ನು ಝಡತಿ ಮಾಡಲಾಯಿತು. ಪಂ. ತಾರಾನಾಥರು ಅಹಿಂಸೆಯಲ್ಲಿ ಅಚಲ ನಿಷ್ಠೆಯುಳ್ಳವರಾಗಿದ್ದರು. ಅದು ಸರಕಾರಕ್ಕೂ ತಿಳಿದಿತ್ತು. ಆದರೂ ಶ್ರೀ. ವ್ಹಿ. ವ್ಹಿ ಎಸ್. ಅಯ್ಯರರಂಥ ಉಗ್ರ ಕ್ರಾಂತಿಕಾರರ ಸಂಪರ್ಕವುಂಟಾದ್ದರಿಂದ ಅವರನ್ನು ಸರಕಾರವು ಸಾಶಂಕ ದೃಷ್ಟಿಯಿಂದ ನೋಡುತ್ತಿತ್ತು

೧೦. ಹಿಂದೂ-ಮುಸಲ್ಮಾನರ ಭಾವನಾತ್ಮಕ ಸಮೀಕರಣ

ಪಂ. ತಾರಾನಾಥರು ಹಿಂದೂ-ಮುಸಲ್ಮಾನರ ಐಕ್ಯಕ್ಕಾಗಿ ಅಹೋರಾತ್ರಿ ಪರಿಶ್ರಮಿಸಿದ್ದಾರೆ. ಇವರಿಬ್ಬರಲ್ಲಿ ಒಕ್ಕಟ್ಟನ್ನು ಸಾಧಿಸಲು ಅಸಾಧ್ಯವೇನಲ್ಲ ಎಂಬ ದೃಢ ನಂಬಿಗೆ ಅವರಲ್ಲಿತ್ತು. ಮುಸ್ಲೀಮರು ಸಹ ಅವರ ಮೇಲೆ ವಿಶ್ವಾಸವನ್ನಿಟ್ಟದ್ದರು. ಸಾವಿರಾರು ಮುಸ್ಲಿಮರು ಅವರ ಉಪದೇಶ ಕೇಳಲು ನಾ ಮುಂದೇ ನೀ ಮುಂದೆ ಎಂದು ನೆರವೇರುತ್ತಿದ್ದರು. ಮಸೀದೆಗಳಲ್ಲಿಯು ಉಪದೇಶ ವೇದಿಕೆಯೂ (Pulpit) ಸಹ ಇವರಿಗೆ ಮುಕ್ತದ್ವಾರವಿತ್ತು. ಮುಸ್ಲೀಮರ ಮೇಲಿದ್ದ ಇವರ ಪ್ರಭಾವವನ್ನು ಸರಕಾರಕ್ಕೆ ಸಹಿಸುವದಾಗಲಿಲ್ಲ.

ಅದೇ ವರ್ಷ ಮೌಲಾನಾ ಶೌಕತ್ ಅಲಿಯವರು ಖಿಲಾಫತ್ ಆಂದೋಲನದ ಸಲುವಾಗಿ ಮದ್ರಾಸಕ್ಕೆ ಹೋಗುವಾಗ್ಗೆ ರಾಯಚೂರ ರೇಲ್ವೆ ನಿಲ್ದಾಣದಲ್ಲಿ ಅವರಿಗೆ ಪಂ. ತಾರಾನಾಥರು ಅದ್ದೂರಿಯ ಸ್ವಾಗತವನ್ನು ನೀಡಿದರು. ಊರಲ್ಲಿ ಪ್ರವೇಶಿಸಲಿಕ್ಕೆ ಮೌಲಾನರಿಗೆ ಸರಕಾರವು ಅನುಮತಿಯನ್ನು ನಿರಾಕರಿಸಿತು. ಮುಸ್ಲೀಮರ ಅಭಿಪ್ರಾಯವನ್ನು ರೂಪಿಸುವಲ್ಲಿ ಪಂ. ತಾರಾನಾಥರಿಗಿದ್ದ ಅಗಾಧ ಶಕ್ತಿಯನ್ನು

ಕಂಡುಕೊಂಡು ಅವರನ್ನು ಮದ್ರಾಸದಲ್ಲಿ ಖಿಲಾಫತ್ ಆಂದೋಲನ ನಡೆಸಲು ಮತ್ತು ತಮ್ಮ ಸಂಗಡ ಮದ್ರಾಸಕ್ಕೆ ಬರಲು ಮೌಲಾನರು ಅವರನ್ನು ವಿನಂತಿಸಿದರು. ಅದರಂತೆ ಅವರಿಬ್ಬರೂ ಒಂದು ವಾರ ಮದ್ರಾಸಿನಲ್ಲಿದ್ದರು. ಪಂ ತಾರಾನಾಥರ ಕಾರ್ಯ ಚಟುವಟಿಕೆಗಳನ್ನು ನೋಡಿ ಮೌಲಾನಾ ಶೌಕತ್ ಅಲಿಯವರು ಬಹುವಾಗಿ ಅವರನ್ನು ಮೆಚ್ಚಿಕೊಂಡರು.

ಅಲ್ಲಿರುವಾಗಲೇ ಪಂ ತಾರಾನಾಥರಿಗೆ ಉಗ್ರಕ್ರಾಂತಿಕಾರರಾದ ಶ್ರೀ. ವ್ಹಿ. ವ್ಹಿ. ಎಸ್. ಅಯ್ಯರವರ ಸಂಪರ್ಕ ವುಂಟಾಯಿತು. ೧೮೫೭ ನೇ ಬಂಡಾಯದ ಉದ್ದೇಶದ ಮೇರೆಗೆ ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನ ಗೊಳಿಸಲು ಮತ್ತು ಸ್ವಾತಂತ್ರ್ಯದ ಹೇತುವನ್ನು ಸಾಂಗೋಪಾಂಗವಾಗಿ ಸಾಧಿಸಲು ಒಬ್ಬರಿಗೊಬ್ಬರು ಸಹಕರಿಸಬೇಕೆಂದು ನಿರ್ಧರಿಸಿದರು. ಅನಂತರ ಶ್ರೀ ಅಯ್ಯರವರು ಪಂ. ತಾರಾನಾಥರ ಆಶ್ರಮಕ್ಕೆ ಮೇಲಿಂದ ಮೇಲೆ ಬರಹೋಗಹತ್ತಿದರು. ಮ. ಗಾಂಧಿಯವರೂ ಸಹ ಮೌಲಾನಾ ಶೌಕತ್ ಅಲಿಯವರಂತೆ ಪಂ. ತಾರಾನಾಥರ ವ್ಯಕ್ತಿತ್ವ ಮತ್ತು ಮಾನವೀಯ ದೃಷ್ಟಿಕೋನಕ್ಕೆ ಮಾರುಹೋಗಿದ್ದರು. ಗಾಂಧೀಜಿಯವರು ಹೈದರಾಬಾದ ಮತ್ತು ಸಿಂಧದಲ್ಲಿ ಕಾಂಗ್ರೇಸಿನ ನೇತೃತ್ವ ವಹಿಸಲು ಪಂ. ತಾರಾನಾಥರನ್ನು ಕೇಳಿದರು. ಹೈದರಾಬಾದ ಡೆಕ್ಕನ್‌ದಲ್ಲಿ (ಕರ್ನಾಟಕದಲ್ಲಿ) ಜನರಿಗೆ ಸ್ವಾತಂತ್ರ್ಯದ ಅರಿವು

ಮಾಡಿಸಲು ಅವರ ಸೇವೆಯು ಅವಶ್ಯವಾಗಿದ್ದರಿಂದ ಪಂ. ತಾರಾನಾಥರು ಆ ಪ್ರಕಾರ ಒಪ್ಪಲು ಸಮ್ಮತಿಸಲಿಲ್ಲ. ರಂಗನಾಥ ದಿವಾಕರರೂ ಸಹ ೧೯೪೨ರ ಚಲೇಜಾವ ಚಳವಳಿಯ ಕರ್ಣಧಾರತ್ವವನ್ನು ಕರ್ನಾಟಕದಲ್ಲಿ ಪಂ. ತಾರಾನಾಥರೇ ವಹಿಸಬೇಕೆಂದು ಇಚ್ಛಿಸುತ್ತಿದ್ದರು.

೧೧. ಸಾಮಾಜಿಕ ಕ್ರಾಂತಿಕಾರಿ ಪಂ. ತಾರಾನಾಥರು

ಪಂ. ತಾರಾನಾಥರು ಒಬ್ಬ ಬಹು ದೊಡ್ಡ ಸಾಮಾಜಿಕ ಕ್ರಾಂತಿಕಾರರಾಗಿದ್ದರು. ಜನರ ಸಾಮಾಜಿಕ ದೃಷ್ಟಿಕೋನವು ಸಂಪೂರ್ಣ ಬದಲಾವಣೆಯಾಗುವದು ಅವರಿಗೆ ಬೇಕಾಗಿದ್ದಿತು. ಅಸ್ಪೃಶ್ಯತಾನಿವಾರಣೆಗಾಗಿ ಬಹಳ ಹೆಣಗಾಡಿದರು. ಸ್ತ್ರೀಯರ ಹಕ್ಕುಗಳನ್ನು ದೊರಕಿಸಲು ಬಹಳ ಪ್ರಯತ್ನಿಸಿದರು. ಸ್ತ್ರೀ ವರ್ಗದ ಮೇಲೆ ಪುರುಷವರ್ಗವು ದಬ್ಬಾಳಿಕೆ ನಡೆಸಿ ಬದುಕುವ ದನ್ನು ಅವರು ಖಂಡಿಸಿದ್ದಾರೆ. ನಿಷ್ಠುರವಾದ ವಾಸ್ತವತೆಯನ್ನು ಬೆಳಕಿಗೆ ತರುವ ಕಾರ್ಯವನ್ನು ಸಾಧಿಸಿದ್ದಾರೆ. ಸ್ವಾರ್ಥದ ಆಶೆಗಾಗಿ ಅಥವಾ ಪರರ ಭೀತಿಗಾಗಿ ಅವರು ಈ ಕಾರ್ಯವನ್ನು ಮಾಡಲಿಲ್ಲ. ಸ್ತ್ರೀಗೆ ವೇದಗಳು 'ಮಾತೃದೇವೋಭವ' ಎಂದು ಪ್ರಥಮ ಸ್ಥಾನವನ್ನು ಕೊಟ್ಟಿವೆ. ಸ್ತ್ರೀಯು ತ್ಯಾಗದ

ಮೂರ್ತಿ; ಸೇವೆಯ ಪ್ರತಿಮೆ; ಅವಳ ತ್ಯಾಗ ಸೇವೆಗಳು ಮಗುವಿನ ವ್ಯಕ್ತಿತ್ವವನ್ನು ಬೆಳೆಯಿಸುವಲ್ಲಿ ಉಪಯೋಗ ವಾದರೆ ಮಾತ್ರ ಸ್ತ್ರೀಯರ ತ್ಯಾಗ ಸೇವೆಗಳು ಸಾರ್ಥಕವಾಗ ಬಲ್ಲವು ಎಂದು ಎಚ್ಚರಿಸಿದ್ದಾರೆ.

ಭಾರತೀಯ ಸಂಸ್ಕೃತಿಯ ಮೌಲ್ಯ ಜಗತ್ತಿನ ಇತಿ ಹಾಸದಲ್ಲಿ ಎಂತಹ ಮಹತ್ವದ ಪಾತ್ರವನ್ನಾಡಿದೆಯೆಂಬುದನ್ನು ಅವರು ತಿಳಿದುಕೊಂಡಿದ್ದರು. ಜಗತ್ತಿನ ಪ್ರಗತಿಗೆ ಭಾರತದ ಕೊಡುಗೆ ಅದ್ವಿತೀಯವಾದುದೆಂದು ಸಂಪೂರ್ಣವಾಗಿ ನಂಬಿದ ಅವರು ಸದ್ಯದ ಜಗತ್ತಿನಲ್ಲಿ ಅದರ ಅಗತ್ಯ ಇನ್ನೂ ಹೆಚ್ಚಾಗಿ ದೆಯೆಂಬುದನ್ನು ಮನಗಂಡಿದ್ದರು. ಈ ಉದ್ದೇಶ ಸಾಧನೆ ಗಾಗಿ ಫ್ರಾನ್ಸ ಮತ್ತು ಅಮೇರಿಕಾದಲ್ಲಿಯ ಕಾರ್ಯಕರ್ತರ ಸಂಪರ್ಕವನ್ನು ಹೊಂದಿದ್ದರು. ೧೯೩೩ರಲ್ಲಿ ಅವರಿಗೆ ನ್ಯೂಯಾರ್ಕದಿಂದ “Parliament of Religions” ಎಂಬ ಸಂಸ್ಥೆಯಿಂದ ಹಿಂದೂ ಧರ್ಮದ ಪ್ರತಿನಿಧಿಯಾಗಿ ಬರಬೇಕೆಂದು ಆದರದ ಆಮಂತ್ರಣ ಬಂದಿತು. ಅವರ ಅನೇಕ ಮಿತ್ರರು ಪ್ರಯಾಣದ ವೆಚ್ಚವನ್ನು ಕೊಡಲೂ ಮುಂದೆ ಬಂದಿದ್ದರು. ಆದರೆ ಪಂ. ತಾರಾನಾಥರು ಆ ಆಮಂತ್ರಣವನ್ನು ಸ್ವೀಕರಿ ಸಲಿಲ್ಲ. ಯಾಕೆಂದರೆ ಆಗ ಕಾಲರಾ ಬೇನೆ ತೀವ್ರತರವಗಿ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಹಬ್ಬುತ್ತಲಿತ್ತು. ವೈದ್ಯರಾದ ಪಂ. ತಾರಾನಾಥರಿಗೆ ಈ ಅನಾಥ ದೀನ ರೋಗಿಗಳನ್ನು ಬಿಟ್ಟು ವಿಚಲಿತರಾಗಲು ಅವರ ಮನಸ್ಸು ಒಪ್ಪಲಿಲ್ಲ.

"ಒಂದು ಹೊತ್ತಿನ ಅನ್ನಕ್ಕೂ ಗತಿಯಿಲ್ಲದ ಬಡವರಿಗೆ ಈ ಹಣವನ್ನು ಹಂಚಿರಿ. ಇಲ್ಲಿ ನನ್ನ ಜನರು ರೋಗದಿಂದ ನರಳುತ್ತಿರುವಾಗ ವೈದ್ಯನಾದ ನಾನು ಅದೆಂತು ಅಲ್ಲಿಗೆ ಹೋಗಿ ಒಣವಾದದಲ್ಲಿ ತೊಡಗಲಿ?" ಎಂದು ಹೇಳಿ ತಮ್ಮ ಉದಾತ್ತವಾದ ಮಾನವೀಯ ಅನುಕಂಪವನ್ನು ತೋರಿಸಿದ್ದಾರೆ.

೧೨. ಗ್ರಂಥಕರ್ತ ಪಂ. ತಾರಾನಾಥರು

ನಾಡಿನ ಅಭ್ಯುದಯವಾಗಬೇಕಾದರೆ ಕುಟುಂಬಗಳ ಅಭಿವೃದ್ಧಿ ಎಲ್ಲ ಬಗೆಯಿಂದಲೂ ಆಗಬೇಕು. ಕುಟುಂಬದ ಪ್ರಗತಿಯಾಗಬೇಕಾದರೆ ಮಹಿಳೆಯರ ಪ್ರಗತಿಯಾಗತಕ್ಕದ್ದು ಎಂಬ ವಿಚಾರ-ಪಂ. ತಾರಾನಾಥರದಾಗಿತ್ತು. ಅಂತೆಯೇ ಅವರು ಮಹಿಳಾ ಜಾಗೃತೆಗೆ ಬಹಳ ಮಹತ್ವವನ್ನಿತ್ತಿದ್ದರು. ಅದಕ್ಕೋಸ್ಕರವೇ ತಮ್ಮ "ಪ್ರೇಮ" ಪತ್ರಿಕೆಯಲ್ಲಿ "ತಾಯಂದಿರಿಗೆ" ಎಂಬ ಶಿರೋನಾಮೆಯಲ್ಲಿ "ಅಮ್ಮಾ" ಎಂಬ ಸಂಭೋಧನೆಯಿಂದ ಪತ್ರಗಳನ್ನು ಬರೆಯುತ್ತಿದ್ದರು. ಒಟ್ಟು ೨೨ ಪತ್ರ ಸಾಹಿತ್ಯಗಳು ಪ್ರಕಟವಾಗಿವೆ. ಅವರು ಬರೆದ ಪತ್ರಗಳ ಸಾರವು ಇಂತಿದೆ.;

"ಮಾತೃ ದೇವೋಭವ" ಎಂಬುದಾಗಿ ವೇದಗಳು ತಾಯಿಗೆ ಕೊಟ್ಟ ವಿಶಿಷ್ಟ ಸ್ಥಾನವನ್ನು ಆಕೆ ರಕ್ಷಿಸಿಕೊಂಡು ಬರಬೇಕು.

ವೇದಗಳು ಕೊಟ್ಟ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾದರೆ ತಾಯಂದಿರ ಸ್ವಭಾವದ ಸುಪರಿಣಾಮವು ಮಕ್ಕಳ ಮೇಲೆ ಆಗಿ ಮಕ್ಕಳನ್ನು ಸದ್ಗುಣಗಳ ಖಣಿಯನ್ನಾಗಿ ತಯಾರು ಮಾಡಬೇಕು.

ತಾಯಂದಿರು ತಮ್ಮ ಮಕ್ಕಳನ್ನು ಎಲ್ಲ ರೀತಿಯಿಂದಲೂ ಉದ್ಧಾರಮಾಡಬೇಕು. ಮಕ್ಕಳ ಉದ್ಧಾರದಿಂದ ತಾಯಿ ತಂದೆಗಳ ಉದ್ಧಾರವಾಗುವದಲ್ಲದೆ ಸಮಾಜ ಮತ್ತು ದೇಶದ ಉದ್ಧಾರವಾಗುವದು. ಪುರುಷೋತ್ತಮರಾದ ಶಿವಾಜಿ, ರಾಮಕೃಷ್ಣ, ವಿವೇಕಾನಂದ, ರಾಮತೀರ್ಥ, ತಿಲಕ, ಗಾಂಧಿ ಮುಂತಾದವರ ತಾಯಂದಿರು ಉದಾತ್ತ ಸ್ವಭಾವವನ್ನು ಹೊಂದಿದ್ದರಿಂದಲೇ ಅಂಥ ಮಹಾತ್ಮರಾದ ಮಕ್ಕಳನ್ನು ಪಡೆಯುವದು ಅವರಿಗೆ ಸಾಧ್ಯವಾಯಿತು. ಅಂಥ ಮಕ್ಕಳನ್ನು ಪಡೆದ ದೇಶವೆ (ಭಾರತವೇ) ಧನ್ಯ. ಲಕ್ಷಕ್ಕೊಬ್ಬರು, ಕೋಟಿಗೊಬ್ಬರು ಅಂಥ ಮಹಾನುಭಾವರು ಉದಿಸಿದರೆ ತೀರದು. ಪ್ರತಿಯೊಬ್ಬ ಭಾರತೀಯ ಮಾತೆಯು ಅಂಥ ಮಕ್ಕಳನ್ನು ಪಡೆದು ಹಾಗೆ ಬೆಳಸಲಿಕ್ಕೆ ಪ್ರಯತ್ನ ಮಾಡಬೇಕು.

ಮಕ್ಕಳ ಒಳ್ಳೇ ಗುಣಗಳಿಗೆ ಇಲ್ಲವೇ ಕೆಟ್ಟ ಗುಣಗಳಿಗೆ ಅವರ ತಾಯಿಯೇ ಮೂಲಕಾರಣಳು. ಚಿಕ್ಕಂದಿನಿಂದ ತಾಯಿಯು ಮಕ್ಕಳಿಗೆ ಒಳ್ಳೇ ಗುಣಗಳನ್ನು ಕಲಿಸದಿದ್ದರೆ ಮಕ್ಕಳು ದುರ್ಬುದ್ಧಿಯನ್ನು ಕಲಿತುಕೊಳ್ಳುವರು. ಜಗತ್ತಿನಲ್ಲಿ

ನಡೆಯುತ್ತಿರುವ ಅಧರ್ಮ ಮತ್ತು ಅತ್ಯಾಚಾರಕ್ಕೆ ತಾಯಿಯೇ ಅಧಿಕ ಪ್ರಮಾಣದಲ್ಲಿ ಹೊಣೆಗಾರಳು.

ಹೊಟ್ಟೆಕಿಚ್ಚು ಎಲ್ಲ ದುರ್ಗುಣಗಳಿಗಿಂತ ಕೆಟ್ಟದ್ದು. ಅದನ್ನು ಸಮೂಲವಾಗಿ ನಾಶಮಾಡಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಲಾರದು. ಮತ್ಸರನೆಂಬ ವೃಕ್ಷದ ಬೀಜವನ್ನು ಸಣ್ಣದಿರುವಾಗಲೇ ಚಿವುಟಿ ಹಾಕಬೇಕು. ಯಾವ ಜನಾಂಗದಲ್ಲಿ ಈ ರೋಗವು ಕಾಣುವದೋ ಆ ಜನಾಂಗದ ಆರೋಗ್ಯ ಸರಿಯಾಗಿಲ್ಲವೆಂದು ತಿಳಿಯಬೇಕು. “ಪರೋಪಕಾರಾಯಮಿದಂ ಶರೀರಂ” ಎಂಬ ತತ್ತ್ವವನ್ನು ಮೊದಲು ತಾಯಿತಂದೆಯರು ಆಚರಿಸಿ ತೋರಿಸಿ ಅದು ಮಕ್ಕಳ ಜೀವನದಲ್ಲಿ ಅಳವಡುವಂತೆ ಪ್ರೇರೇಪಿಸಬೇಕು.

ಸಾಧು ಸತ್ಪುರುಷರ ದಿವ್ಯ ಬೋಧನೆಗಳನ್ನು ತಾಯಂದಿರು ಮಕ್ಕಳಿಗೆ ಕಲಿಸಬೇಕು. ಅಂದರೆ ಅವರು ಧಾರ್ಮಿಕರಾಗಿ ಬಾಳುವರು. ಈಸು ಬಂದವನಿಗೆ ಅದು ಒಂದು ಸಿದ್ಧಿ. ಅದರ ಆನಂದವನ್ನು ಅವನೇ ಸವಿಯುವನು. ಅದರಂತೆ ಪ್ರತಿಯೊಬ್ಬ ತಾಯಂದಿರ ಮಕ್ಕಳು ಈ ಸಿದ್ಧಿಯನ್ನು ಸಂಪಾದಿಸಿದರೆ ಅಹಂಭಾವವು ಕಡಿಮೆಯಾಗಿ ಪರಾರ್ಥ ಭಾವನೆಯು ವೃದ್ಧಿಸುವದು. ಜ್ಞಾನದ ಬಲದಿಂದ ಅಜ್ಞಾನದ ಕೇಡು, ಜ್ಯೋತಿಯ ಬಲದಿಂದ ತಮಂಧದ ಕೇಡು ಉಂಟಾಗುವದು. ಗುಣ ಸಂಪಾದನೆಗಾಗಿ ಹೊರೆಗಟ್ಟಲೆ

ಪುಸ್ತಕಗಳನ್ನು ಓದಬೇಕಾಗಿಲ್ಲ. ಜ್ಞಾನ ಆದೆಷ್ಟೋ ಲಭಿಸಿರಲಿ ಇನ್ನೂ ಜ್ಞಾನವನ್ನು ಸಂಪಾದಿಸಬೇಕು ಎಂಬ ಮಹತ್ವಾಕಾಂಕ್ಷೆ ಮತ್ತು ಸಾಹಸವನ್ನಿಟ್ಟುಕೊಳ್ಳತಕ್ಕದ್ದು.

ಮನುಷ್ಯರು ಪಶುಪಕ್ಷಿಗಳಂತೆ ಜೀವನ ಮಾಡಬಾರದು. ಪಶುವಿಗಿಂತ ಭಿನ್ನನೆನಿಸಿಕೊಳ್ಳಬೇಕು. ಮನುಷ್ಯನು ಕೆಲವೊಂದು ಉದಾತ್ತ ಗುಣಗಳನ್ನು ಅಳವಡಿಸಿಕೊಂಡರೆ ಮನುಷ್ಯ ಮತ್ತು ಪಶುಗಳಲ್ಲಿ ಅಂತರ ಕಂಡು ಬರದೇ ಇರಲಾರದು. ಅಂಥ ಉದಾತ್ ಗುಣಾಗಳಲ್ಲೊಂದಾದ ದಾನ ಗುಣವು ಮಹತ್ವವಾದದ್ದು. ಹಂಚಿ ತಿನ್ನುವದನ್ನು ಮಕ್ಕಳಿಗೆ ಮೊದಲು ಕಲಿಸಬೇಕು.

ನಿಷ್ಕಲ್ಮಷವಾದ ಸಾತ್ವಿಕ ಪ್ರೇಮ ಬೀಜವನ್ನು ಮಕ್ಕಳ ಹೃದಯಮಂದಿರಗಳಲ್ಲಿ ಬಿತ್ತಬೇಕು. "ಆದರೆ ಯಾವದೇ ರೂಪವು ಎಷ್ಟು ಸೊರಗಿದ್ದರೂ ಕನ್ನಡಿಯು ಕೊಳಕಾಗಿದ್ದರೆ ಪ್ರತಿಬಿಂಬವು ವಿಕಾರವಾಗಿ ಕಾಣುವದು." ಅದರಂತೆ ಮಕ್ಕಳಲ್ಲಿ ಕೃತ್ರಿಮ ಭಾವನೆಗಳು ನಿರ್ಮಾಣವಾದರೆ ಮನಸ್ಸಿನಲ್ಲಿ ಉದ್ಭವಿಸುವ ಪ್ರೀತಿಯು ನಿಷ್ಕಲಂಕ, ಸಾತ್ವಿಕ ಮತ್ತು ಸಹಜವಾಗಲಾರದು.

ಮನುಷ್ಯನು ಕುಟುಂಬದಲ್ಲಿ, ಗ್ರಾಮದಲ್ಲಿ, ಪಟ್ಟಣಗಳಲ್ಲಿ ಮೇಲಾಗಿ ಜನರ ಮಧ್ಯದಲ್ಲಿ ಜನಿಸುವದರಿಂದ ಸಮಾಜ ಜೀವಿಯಾಗಿ ಬಾಳಬೇಕು. ಆದರಂತೆ ಮಕ್ಕಳ

ಪರಿಸರವು ಒಳ್ಳೆಯದಾಗಿರುವಂತೆ ಮಾಡಬೇಕು. ಒಳ್ಳೇ ಸಮಾಜ ಜೀವಿಯು ಒಳ್ಳೇ ಸಮಾಜವನ್ನು, ದೇಶವನ್ನು, ಜಗತ್ತನ್ನು ಕಟ್ಟಬಲ್ಲನು. ಇವಕ್ಕೆಲ್ಲ ತಾಯಂದಿರೇ ಹೊಣೆಗಾರರು. ತಾಯಂದಿರು ಈ ಹೊಣೆಯನ್ನು ವಹಿಸದಿದ್ದರೆ ಅವರು ನಿಜವಾದ ತಾಯಂದಿರಾಗಲಾರರು.

ಸಮಾಜದಲ್ಲಿ ಒಬ್ಬನಿಂದ ಒಳಿತನ್ನು ಮಾಡುವದಾಗದಿದ್ದರೆ ಕೆಟ್ಟದ್ದನ್ನಾದರೂ ಮಾಡಬಾರದು ಎಂಬುವ ಮನೋವೃತ್ತಿಯನ್ನು ಮಕ್ಕಳಲ್ಲಿ ಬೆಳಸಬೇಕು. ನ್ಯಾಯವಾದ ನಡತೆಯಿಂದ ನ್ಯಾಯವಾದ ಸಮಾಜ ನಿರ್ಮಾಣವಾಗುವದು. ಅನ್ಯಾಯದ ನಡತೆಯಿಂದ ನ್ಯಾಯ ಸಮಾಜವು ಮರೆಯಾಗಿ ಎಲ್ಲೆಲ್ಲೂ ಅನ್ಯಾಯ, ಅನೀತಿ ತಾಂಡವವಾಡುವದು. ಪ್ರತಿಯೊಂದು ದೇಶದಲ್ಲಿಯೂ, ಸಮಾಜದಲ್ಲಿಯೂ ಉತ್ತಮವಾದ ರೀತಿನೀತಿಗಳಿವೆ. ಅಂಥ ಕೆಲವು ರೀತಿ ನೀತಿಗಳನ್ನು ಮಕ್ಕಳಿಗೆ ಕಲಿಸಬೇಕು. ಅಂದರೆ ಎಲ್ಲರಿಗೂ ಸುಖಶಾಂತಿಯನ್ನು ನೀಡುವಂಥ ಸಮಾಜ, ದೇಶ ನಿರ್ಮಾಣವಾಗುವದು.

ಕರ್ತವ್ಯ ಹೀನರಿಗೆ ಇಹಪರಗಳಲ್ಲಿ ಸುಖವಿಲ್ಲ. ಕರ್ತವ್ಯ ಪರಾಯಣರಿಗೆ ಜೀವನ್ಮುಕ್ತಿಯೂ ಲಭಿಸುವದು. "ಈಸಬೇಕು ಇದ್ದು ಜಯಿಸಬೇಕು" ಎಂಬ ಉಕ್ತಿಯಂತೆ ಮನುಷ್ಯರು ಮನುಷ್ಯತ್ವ ಪಡೆಯಬೇಕಾದರೆ ಜೀವನದಲ್ಲಿ ಘುಮುಕಿ, ಈಜಾಡಿ ಪಾರಾಗಬೇಕು ಅವನೇ ನಿಜವಾಗಿಯೂ ಧನ್ಯನು. ಯಾವ

ತಾಯಿ ಇಂಥಹ ಆಚರಣಗೆ ಮಕ್ಕಳನ್ನು ಒಳಪಡಿಸುವಳೋ ಅವಳೇ ತಾಯಿತನಕ್ಕೆ ಅರ್ಹತೆಯನ್ನು ಪಡೆಯುವಳು.

ತಾಯಿಯು ಒಳ್ಳೆಯವಳಾಗದಿದ್ದರೆ ಮಗನು ಒಳ್ಳೆಯವನಾಗುವದಿಲ್ಲ. ಅವಳಿರುವ ಮನೆಯ ವಾತಾವರಣ ಪರಿಶುದ್ಧವಾಗಿರಬೇಕು. ಇಂಥ ಬಹು ಜನ ಕುಟುಂಬಗಳು ನನ್ನ ಕಣ್ಣಿಗೆ ಇನ್ನೂ ಬೀಳಲಿಲ್ಲ ಎನ್ನುವ ನೋವು ನನಗಿದೆ ಎಂದು ಆಡಿದ್ದಾರೆ. ಮನೆಯಲ್ಲಿಯ ಒಳ್ಳೇ ವಾತಾವರಣದ ಪರಿಣಾಮ ಮಕ್ಕಳ ಮೇಲೆ ಆಗಿ ಅವರೂ ಯೋಗ್ಯರಾದ ವ್ಯಕ್ತಿಗಳಾಗಿ ಮಾರ್ಪಾಡುವದರಲ್ಲಿ ಸಂದೇಹವಿರಲಿಲ್ಲ.

ಆಹಾರ ನಿದ್ರೆಗಳು ಹಿತಮಿತವಾಗಿರಬೇಕು. ಇದನ್ನು ಅರಿಯದ ತಂದೆ ತಾಯಿಗಳು ಮಕ್ಕಳ ಪಾಲಿಗೆ ಯಮದೂತರಾಗುವರು. ಯಾಕೆಂದರೆ ದೇಹ ಮತ್ತು ಮನಸ್ಸುಗಳಲ್ಲಿ ಪರಸ್ಪರ ನಂಟು ಇದೆ. ಸಾತ್ವಿಕ ಆಹಾರದಿಂದ ಸಾತ್ವಿಕ ಮತ್ತು ತೇಜಸ್ವಿ ವ್ಯಕ್ತಿತ್ವವು ನಿರ್ಮಾಣವಾಗುವದು. ಆದರೆ ಸಾತ್ವಿಕ ಆಹಾರವನ್ನೇ ಮಿತಿಮೀರಿ ಸೇವಿಸಿದರೆ ಅದರಿಂದ ಅನಾರೋಗ್ಯವಾಗಿ ದುಷ್ಪರಿಣಾಮವಾಗುವದು. ಯುರೋಪಿಯನ್ ತಾಯಂದಿರು ಇದಕ್ಕೆ ಅಪವಾದವಾಗಿದ್ದಾರೆ. ಅವರಲ್ಲಿ ಎಷ್ಟು ಬಡವರಿದ್ದರೂ (ಬಡವರಿರುವದಂತೂ ಕಡಿಮೆಯೇ) ಮಕ್ಕಳನ್ನು ಶಿಶುವಿಹಾರಗಳಿಗೆ ಕಳಿಸುವರು. ಅಲ್ಲಿ ಮಕ್ಕಳ ವಯೋಮಾನಕ್ಕನುಸಾರವಾಗಿ ಆಹಾರವನ್ನು ಕೊಡುವರು

ಆದರೆ ನಮ್ಮ ಮಕ್ಕಳು ದಿನಕ್ಕೆ ಹತ್ತಾರು ಸಲ ಎಲ್ಲರೊಡನೆಯೂ ಊಟ ಮಾಡುವವು. ಆದ್ದರಿಂದ ತಾಯಂದಿರು ಸುಶಿಕ್ಷಿತರೇ ಇರಲಿ ಅಶಿಕ್ಷಿತರೇ ಇರಲಿ ಮಕ್ಕಳ ಆರೈಕೆ ಸರಿಯಾದ ರೀತಿಯಲ್ಲಿ ಮಾಡುವ ಶಿಸುಸಂಗೋಪನ ವಿಧಾನವನ್ನು ಕಲಿತುಕೊಳ್ಳಬೇಕು.

"ಹಿರಿತನಕ್ಕೆ ಹಿರಿಯ ಭಾವಗಳ ಕರ್ಮಗಳುಬೇಕು." ಹಿರಿಯರು ಹೇಳುವಮಾತನ್ನು ಕಿರಿಯರು ಕೇಳಬೇಕು ಮತ್ತು ಹಿರಿಯರಿಗೆ ವಿಧೇಯರಾಗಿರಬೇಕೆಂದು ಪ್ರತಿಯೊಬ್ಬ ಹಿರಿಯರ ಆಶೆ ಆಕಾಂಕ್ಷೆ ಇರುತ್ತದೆ. ಆದರೆ ಹಿರಿಯರ ಮಾತುಗಳಲ್ಲೆಲ್ಲಾ ಹಿರಿಮೆ ಇದೆಯೋ? ಎಂಬ ಅರ್ಥವನ್ನು ಬಹಳ ಮಂದಿ ಹಿರಿಯರು ಆದರಲ್ಲಿಯೂ ತಾಯಂದಿರು ಮಾಡುವದಿಲ್ಲ. ಹಿರಿಯರ ಮಾತನ್ನು ಕೇಳದವರು ಪಾಪಿಗಳೆಂದು ಸರ್ವಸಾಮಾನ್ಯವಾದ ಅಭಿಪ್ರಾಯ ತಳೆಯುತ್ತಾರೆ. ಆದರೆ ಪ್ರಹ್ಲಾದನು ತಂದೆಯ ಮಾತನ್ನು ಕೇಳಲಿಲ್ಲ. ಭರತನು ತಾಯಿಯ ಮಾತನ್ನು ಕೇಳಲಿಲ್ಲ. ವಿಭೀಷಣನು ಅಣ್ಣನ ಮಾತನ್ನು ಕೇಳಲಿಲ್ಲ. ಹಾಗಾದರೆ ಇವರೆಲ್ಲರೂ ಪಾಪಿಗಳೇ! ಇಲ್ಲ. ಇವರು ಮಹಾನುಭಾವರಾಗಿ ಹೋದರು. ಹಿರಿತನವು ಹಿರಿಮೆ ಬುದ್ಧಿಯಿಂದ ಬರುವದಲ್ಲದೆ ವಯಸ್ಸಿನಿಂದಲ್ಲ.

ಓದುವದು ಹೆಚ್ಚಾದಂತೆ ನಮ್ಮಲ್ಲಿ ವಿದ್ಯೆಯು ಹೆಚ್ಚಾಗಬೇಕು. ಓದು ಒಕ್ಕಾಲಾದರೆ ಬುದ್ಧಿ ಮುಕ್ಕಾಲಾಗಬೇಕು.

ವಿದ್ಯೆಗೆ ವಿಚಾರ ಮತ್ತು ಆಚಾರಗಳು ಆಧಾರಸ್ಥಂಬಗಳಾಗಬೇಕು. ಆದ್ದರಿಂದ ಅನುಭವವು ವೃದ್ಧಿಸುವದು. ಈ ಅನುಭವವೇ ಭಾವೀ ಪೀಳಿಗೆಯ ಬಾಳಿನ ಬುತ್ತಿ.

ತಾಯಿಗೆ ವಿದ್ಯೆಯ ಕಡೆಗೆ ಒಲವಿದ್ದರೆ ತನ್ನ ಮಕ್ಕಳ ಅಭಿರುಚಿಗೆ ತಕ್ಕ ಶಿಕ್ಷಣವನ್ನು ಕೊಡಲು ಅರ್ಹಳಾಗುತ್ತಾಳೆ. ಅಂಥ ತಾಯಿ ಇದ್ದ ಮನೆಯಲ್ಲಿ ಸುಖವು ನೆಲಸುವದು.

ಬದುಕಿರಬೇಕಾದರೆ ಅನ್ನವು ಬೇಕೆಬೇಕು. ಬಟ್ಟೆ ಇಲ್ಲದೆ ಮನುಷ್ಯನು ಬದುಕಿರಬಹುದು. ಆದರೆ ಬಟ್ಟೆಯು ಬೇಕೆ ಬೇಕು ಎಂಬುವ ರೂಢಿ ಅನಾದಿಕಾಲದಿಂದ ಬಂದಿದೆ. ಅದು ಜೀವನದ ಆವಶ್ಯಕತೆಗಳಲ್ಲಿ ಒಂದಾಗಿದೆ. "ಎಲ್ಲ ಮಾಡುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂಬ ನಾಣ್ಣುಡಿಯಂತೆ ಸಾಧನೆ ಮತ್ತು ಗುರಿ ಒಂದಾಗಿರಬೇಕು. ಬಟ್ಟೆಹಾಕಿಕೊಳ್ಳುವ ಒಳ್ಳೆ ರೂಢಿಯಂತೆ, ಒಳ್ಳೆ ರೂಢಿಗಳು ಸಮಾಜದಲ್ಲಿ ಬೆಳೆಯಬೇಕು.

ಅನೇಕ ಶತಮಾನಗಳಿಂದ ನಮ್ಮ ದೇಶದ ಸಂಪತ್ತು ಪರದೇಶಗಳಿಗೆ ಹೋಗುವ ಕಚ್ಚಾ ಸರಕುಗಳ ಮುಖಾಂತರ ಹೋಗುತ್ತಿತ್ತು. ಅದಕ್ಕೆ ನಾವು ಬಡವರಾಗಿದ್ದೆವು. ಇನ್ನು ಮುಂದೆ ಧನಿಕರಾಗಲು ಸಾಧ್ಯವಿದೆ. ಅದುವೇ ದೇಶೀಯ ವಸ್ತುಗಳ ಉಪಯೋಗದಲ್ಲಿದೆ. ಉದಾ: ಖಾದಿ ಬಟ್ಟೆಯನ್ನು ಧರಿಸುವದು ದೇಶಾಭಿಮಾನದ ಸಂಕೇತವೆಂದು ನಾವು ಈಗಲೂ

ತಿಳಿದಿದ್ದೇನೆ. ಕಾರಣ ಮಕ್ಕಳಿಗೆ ಖಾದಿ ಬಟ್ಟೆಯನ್ನು ಹಾಕಿ ಸರಳ ಜೀವನವನ್ನು ಅನುಸರಿಸಲಿಕ್ಕೆ ತಿಳಿಸಬೇಕು. ಇದರಿಂದ ಬಡವರ ಬಗ್ಗೆ ಅನುಕಂಪ ದಯೆ ಮುಂತಾದ ಗುಣಗಳು ಮಕ್ಕಳಲ್ಲಿ ಉತ್ಪನ್ನವಾಗುತ್ತವೆ. ದೇಶಾಭಿಮಾನ ಉಂಟಾಗಿ ಬಡತನವು ಕಡಿಮೆಯಾಗುತ್ತದೆ.

ಸ್ವಾಮಿ ವಿವೇಕಾನಂದರು ಭಾರತೀಯರಿಗೆ ಪಾಶ್ಚಾತ್ಯರ ಅಂಧಾನುಕರಣವನ್ನು ತ್ಯಜಿಸಲು ಕೇಳಿಕೊಂಡಿದ್ದಾರೆ. ಅಂಧಾನುಕರಣದಲ್ಲಿ ಅಧಃಪತನದ ಬೀಜವಡಗಿದೆ. ಅಂಧಾನುಕರಣದಿಂದ ಮನುಷ್ಯನು ದುರ್ಬಲನಾಗುತ್ತಾನೆ. ಇದರಿಂದ ಮನುಷ್ಯನ ಉದ್ಧಾರವು ಹೇಗೆ ತಾನೆ ಸಾಧ್ಯ ?

ಪ್ರತಿಯೊಬ್ಬರೂ ಒಳ್ಳೆಯದಾವುದು, ಕೆಟ್ಟದ್ದಾವುದು, ಪಾಪವಾವುದು, ಮತ್ತು ಪುಣ್ಯವಾವುದೆಂಬುದನ್ನು ಸಾರಾಸಾರ ವಿಚಾರ ಮಾಡಲಿಕ್ಕೆ ಕಲಿಯಬೇಕು. ಎಲ್ಲವೂ ಪಾಪಮಯವಲ್ಲ, ಎಲ್ಲವೂ ಪುಣ್ಯದಿಂದೊಡಗೂಡಿಲ್ಲ. ಸತ್ ಹಾಗೂ ಅಸತ್ ಇವುಗಳನ್ನು ವಿವೇಕದ ಒರೆಗಲ್ಲಿಗೆ ಹಚ್ಚಿದರೆ ಅವುಗಳ ತಾರತಮ್ಯ ತಂತಾನೆ ಹೊಳೆಯುವದು. ದಯೆಯೇ ನಿಜವಾದ ಧರ್ಮ. ದಯೆ ಇಲ್ಲದ್ದು ಧರ್ಮವೇ ಅಲ್ಲ. ತಾಯಂದಿರ ಮುಖ್ಯ ಧರ್ಮವೆಂದರೆ ಇಂದಿನ ಮಕ್ಕಳನ್ನು ಮಾನವರನ್ನಾಗಿ ಮತ್ತು ಮಹಾನುಭಾವರನ್ನಾಗಿ ಮಾಡಿ ಜಗತ್ತಿನ ಕಲ್ಯಾಣಕ್ಕೋಸ್ಕರ ಅಣಿಮಾಡುವದಾಗಿದೆ.

ಹೀಗೆ ಪಂ. ತಾರಾನಾಥರು ಕನ್ನಡ ನಾಡಿನ ತಾಯಂದಿರಿಗೆ ದೇಶದ ನಾಳಿನ ನಾಗರಿಕರಾಗುವ ಇಂದಿನ ಮಕ್ಕಳಲ್ಲಿ ವ್ಯಕ್ತಿತ್ವವನ್ನು ರೂಪಿಸಲಿಕ್ಕೆ ಯಾವ ಗುಣಗಳನ್ನು ಅವರು ಮೊದಲು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತದನಂತರ ತಮ್ಮ ಮಕ್ಕಳಲ್ಲಿ ಅಳವಡಿಸುವರೋ ಅವರೇ ನಿಜವಾದ ತಾಯಂದಿರೆಂಬ ಅಭಿಪ್ರಾಯವನ್ನು ಮಾರ್ಮಿಕವಾಗಿ ಪ್ರತಿಪಾದಿಸಿದ್ದಾರೆ.

'ಧರ್ಮಸಂಭವ, ಅಥವಾ ಧರ್ಮದ ಮೂಲತತ್ತ್ವಗಳು ಎಂಬುದು ಪಂ. ತಾರಾನಾಥರ ಇನ್ನೊಂದು ಗ್ರಂಥ. ಅದರಲ್ಲವರು ವಿಚಾರವಿಪ್ಲವ, ಮತವೋ ಸತ್ಯವೋ, ದೇವರ ಮೊದಲು ತೊದಲು, ಅತಿ ಆಶೆ ಗತಿಗೇಡು ನಿಸರ್ಗ ಮತ್ತು ಕೃತ್ರಿಮತೆ ಅಧೋಗತಿ, ಸಹಜ ಸಮರಸ ಎಂಬ ವಿಷಯಗಳ ಮೇಲೆ ಪ್ರಬಂಧವನ್ನು ಬರೆದಿದ್ದಾರೆ.

ಬೀಜ ವೃಕ್ಷ ನ್ಯಾಯದಂತೆ ಯಾವದೊಂದು ತತ್ತ್ವವಿಲ್ಲದೆ ಧರ್ಮವೊಂದೂ ಹುಟ್ಟಲಾರದು. ಎಲ್ಲ ಧರ್ಮಗಳ ತಿರುಳೆಲ್ಲ ಒಂದೇ ಆಗಿದ್ದರೂ ಅವುಗಳಲ್ಲಿ ವಿರೋಧಾಭಾಸವು ಕಂಡು ಬರುತ್ತದೆ. ಈ ಧರ್ಮಗಳಲ್ಲಿಯ ವಿರೋಧವು ಧರ್ಮಾಚರಣೆಯಲ್ಲಿಯೂ ನುಸುಳಿ ಅಲ್ಲಿಯೂ ವಿರೋಧವು ಬೆಳೆಯುತ್ತ ಹೋಗುವದು. ಈ ಧರ್ಮ-ಧರ್ಮಗಳಲ್ಲಿಯ ಪರಸ್ಪರ ವಿರೋಧವೇ ಭರತಭೂಮಿಯು ಸಾವಿರಾರು ವರ್ಷಗಳಿಂದ ದಾಸ್ಯ ಶೃಂಖಲೆಗೊಳಪಡಬೇಕಾದ ಮುಖ್ಯ ಕಾರಣ. ಚೆನ್ನಾಗಿ ಬದುಕಿ

ಕೊಳುವದೇ ನಿಜವಾದ ಧರ್ಮ, ದೇಶದ ಪ್ರಗತಿಗೆ ಪ್ರಬಲ ಸಾಧನ.

ಮತಗಳ ಜನ್ಮ ಹೇಗಾಯಿತು? ಮತ ಸ್ಥಾಪಕನಾರು? ಮತಾನುಯಾಯಿಗಳು ಹೇಗೆ ಆಗುತ್ತಾರೆ? ಹಲಕೆಲವು ಜಾಣರು ಮತಗಳನ್ನು ಮಾಡಿದರೆಂದು ಭಾವಿಸುವದೋ ಹೇಗೆ? ಅಥವಾ ಒಬ್ಬಿಬ್ಬರ ಮೋಸವೇ ಮತಗಳ ಉದ್ದೇಶವೇ? ಎಂಬ ಹಲವಾರು ಪ್ರಶ್ನೆಗಳಿಗೆ ಪಂ. ತಾರಾನಾಥರು ಪರಿಹಾರವನ್ನು ಕಂಡು ಹಿಡಿಯಲಿಕ್ಕೆ ಪ್ರಯತ್ನಿಸಿದ್ದಾರೆ. ಎಲ್ಲರನ್ನೂ ಎಲ್ಲ ಕಾಲಕ್ಕೂ ಮೋಸಗೊಳಿಸಲು ಸಾಧ್ಯವಿಲ್ಲವೆಂಬಂತೆ ಕಾಲ ಕಾಲಕ್ಕೆ ಹಲ ಕೆಲವು ಜನರನ್ನು ಕೆಲವರು ಕೆಲವುಕಾಲ ಮೋಸಗೊಳಿಸಲಿಕ್ಕೆ ಸಾಧ್ಯ. ಇನ್ನು ಬಹುತೇಕವಾಗಿ ಹೆಚ್ಚಿನ ಜನರು ತಿಳಿದೋ ತಿಳಿಯದೆಯೋ ಮತಸ್ಥಾಪಕರ ಸರಳತೆಯನ್ನು ಮನ್ನಿಸಿ ಅವರ ಸೂತ್ರಗಳನ್ನು ಹಿಡಿದೇ ನಡೆಯುತ್ತಾರೆ "ಆದರೆ ಸರಳತೆಯು ಮೋಸವಲ್ಲವಾದರೂ ಸಂಪೂರ್ಣ ಸತ್ಯ ಜ್ಞಾನವೂ ಅಲ್ಲ." ಹಿಂದೂ ಧರ್ಮದ ಕೆಲವು ಸಾಂಪ್ರದಾಯಗಳು ಅಂಧ ಶ್ರದ್ಧೆಗಳಾಗಿ ರಾಷ್ಟ್ರ ಜೀವನವನ್ನು ಹಾಳುಮಾಡಿವೆ.

ಹಿಂದೂ ಧರ್ಮವು ಕಾಲಕ್ರಮೇಣವಾಗಿ ತನ್ನ ಸತ್ವವನ್ನು ಕಳೆದುಕೊಂಡು ಕೆಟ್ಟ ರೂಢಿ ಸಾಂಪ್ರದಾಯಗಳ ಅಂಧ ಶ್ರದ್ಧೆಗಳ ಸೆಳವಿಗೆ ಸಿಕ್ಕಿತು. ಪ್ರಾಚೀನ ಧರ್ಮವು ಮಾನವನ ಭೀತಿಯಿಂದ ಹುಟ್ಟಿದೆ. ಮಾನವನು ಮನುಷ್ಯನನ್ನು ಕೆಲವೇ ನಿಮಿಷಗಳಲ್ಲಿ ಕೊಲ್ಲುವಂಥ ಭಯಂಕರ ವಸ್ತುಗಳಾದ ಹಾವು,

ಸಿಡಿಲು, ಹುಲಿ ಮುಂತಾದ ಭೀಕರ ವಸ್ತುಗಳಿಗೆ ನಾಮಕರಣ ಮಾಡಿ ದೇವ ದೇವತೆಗಳನ್ನು ನಿರ್ಮಿಸಿದನು. ಜನರ ವಿಚಾರಗಳು ಬದಲಾದಂತೆ ದೇವ ದೇವತೆಗಳೂ ಬದಲುಗೊಳ್ಳುತ್ತ ಹೋಗಿವೆ. ಆದ್ದರಿಂದ ಪ್ರಾಚೀನ ಧರ್ಮಕ್ಕೂ ಮತ್ತು ಈಗಿನ ಧರ್ಮಕ್ಕೂ ಅಥವಾ ಪ್ರಾಚೀನ ದೇವರಿಗೂ ಮತ್ತು ಈಗಿನ ದೇವರಿಗೂ ವೈಷಮ್ಯಗಳು ಬಹಳ ಕಂಡುಬಂದಿವೆ. ಧರ್ಮ ದೇವನಿರ್ಮಿತವಲ್ಲ ಅದು ಮಾನವ ನಿರ್ಮಿತ. ಮಾನವನಿಗೆ ಪ್ರಪಂಚದಲ್ಲಿ ಸುಖ ವಿಲ್ಲವೆಂಬುದು ಸರ್ವ ಸಾಮಾನ್ಯವಾದ ತಿಳುವಳಿಕೆ. ಒಳ್ಳೆ ಯುವರಿಗೆ ಬಹಳ ಸಂಕಟಗಳು ದುರ್ಜನರಿಗೆ ಸಂಕಟಗಳು ಕಡಿಮೆಯನ್ನುವ ಮಾತು ಬಂದಿದೆ. ಇದು ಒಂದು ದೇವರ ಲೀಲೆ ಎಂದು ಧರ್ಮಗಳು ತಿಳಿಸಿವೆ. ಒಳ್ಳೆಯವರಿಗೆ ಅಂತ್ಯದಲ್ಲಿ ಜಯಲಭಿಸುವದು. ಸಂಕಟಾವೃತವಾದ ಒಳ್ಳೆ ಜನರು ಸದಾ ದೇವರನ್ನು ಸ್ಮರಿಸಲೆಂದು ಸದಾ ಕಷ್ಟಗಳನ್ನೊಡ್ಡುವನು. ದುರ್ಜನರಿಗೆ ಸುಖವನ್ನು ಅವರ ವಿನಾಶಕ್ಕಾಗಿ ಕೊಡುತ್ತಾನೆ ಎಂಬ ಭಾವನೆಗಳೂ ಉತ್ಪನ್ನವಾದವು. ಇದರಿಂದ ಸ್ವರ್ಗ ನರಕಗಳ ಕಲ್ಪನೆ ಹುಟ್ಟಿತೆಂದು ಪಂ. ತಾರಾನಾಥರು ತಿಳಿಸಿದ್ದಾರೆ.

ವೈದಿಕ ಧರ್ಮದಿಂದ ಹಿಂಸೆಯು ವಿರಾಟ ರೂಪವನ್ನು ತಾಳಿ ಜನರ ಮನಸ್ಸಿನಲ್ಲಿ ಶಾಂತಿ ನೆಮ್ಮದಿಗಳು ಕದಡಿದವು. ಅವರ ಮನಸ್ಸಿಗೆ ಶಾಂತಿಯನ್ನು ಕೊಡಬಲ್ಲ ಹೊಸ ಧರ್ಮವನ್ನು ಸ್ವೀಕಾರ ಮಾಡಲು ಜನರು ಸಿದ್ಧರಾಗಿದ್ದರು. ಅಷ್ಟರಲ್ಲಿ ಬೌದ್ಧಧರ್ಮ ಉದಯವಾಯಿತು. ಇಲ್ಲಿಯವರೆಗೆ ಶೂದ್ರರು

ಮತ್ತು ಸ್ತ್ರೀಯರು ಬ್ರಾಹ್ಮಣ-ಕ್ಷತ್ರಿಯರ-ವೈಶ್ಯರ ಅತ್ಯಾಚಾರಕ್ಕೆ ಬಲಿಯಾಗಿದ್ದರು. ಬೌದ್ಧಧರ್ಮವು ವೈದಿಕ ಧರ್ಮವನ್ನು ಖಂಡನೆಮಾಡಿತು. ಮಾನವರೆಲ್ಲರೂ ಹುಟ್ಟಿನಿಂದ ಸಮಾನರು ಈ ಪ್ರಜ್ಞೆಯಿಂದ ಜನರಲ್ಲಿ ಇವೆರಡು ಧರ್ಮಗಳ ಅಂತರ ಕಂಡುಬರಲಿಕ್ಕೆ ಹತ್ತಿತು.

ಕೃತ್ರಿಮ ಜೀವನವು ನಿಜವಾದ ಜೀವನಕ್ಕೆ ವಿರುದ್ಧವಾದುದು. ಕೃತ್ರಿಮತೆ ಮತ್ತು ನಿಸರ್ಗ ಇವು ಒಂದಕ್ಕೊಂದು ಹೊಂದಿಕೊಂಡು ಹೋಗುವದಿಲ್ಲ. ಮಾನವನು ಪ್ರಾಣಿಗಳಿಗಿಂತ ಬುದ್ಧಿಶಾಲಿ. ಪ್ರಾಣಿಗಳು ನಿಸರ್ಗವು ನಡೆಸಿದಂತೆಯೇ ನಡೆಯುವವು. ಆದರೆ ಮಾನವನ ಬುದ್ಧಿ ಭಾವನೆಗಳಿಂದಾಗುವ ಸಕಲ ವಿಷಯಗಳು ಕೃತ್ರಿಮವೇ? ಎಂದು ಪಂ. ತಾರಾನಾಥರು ಪ್ರಶ್ನಿಸಿದ್ದಾರೆ. ಆಹಾರವು ಅನೈಸರ್ಗಿಕವಾಗಿರದಿದ್ದರೆ ರೋಗ ಬರುವದಿಲ್ಲ. ರೋಗ ಬಂದರೆ ಚಿಕಿತ್ಸೆಯು ನೈಸರ್ಗಿಕವಾಗಿರಬೇಕು. ಅಂದರೆ ರೋಗವು ಗುಣವಾಗುವದು.

ಮನುಷ್ಯನು ಸ್ವಾರ್ಥಮಯ ಜೀವನವನ್ನು ನಡೆಸುವದರಿಂದ ಸಮಾಜವು ಅಧೋಗತಿಗಿಳಿಯುವದು. ಸ್ತ್ರೀ ವರ್ಗದ ಮೇಲೆ ಪುರುಷ ವರ್ಗವು ದಬ್ಬಾಳಿಕೆ ನಡೆಸಿ ಸ್ತ್ರೀಯರು ಪುರುಷರಿಗಿಂತಲೂ ನೀಚಸ್ಥಾನಕ್ಕಿಳಿಯಲ್ಪಟ್ಟಿದ್ದಾರೆ. ಇದರಿಂದ ಸ್ತ್ರೀಯು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ಅಧೋಗತಿಗಿಳಿದಿದ್ದಾಳೆ. ಹಿಂದು ಸಮಾಜವು ಅನೇಕ ಪಂಗ

ಡಗಳಲ್ಲಿ ವಿಭಜಿಸಲ್ಪಟ್ಟು ಸಾವಿರಾರು ಜಾತಿ ಉಪಜಾತಿಗಳನ್ನು ನಿರ್ಮಾಣಮಾಡಿ ದೇಶವನ್ನು ಅಧೋಗತಿಗಿಳಿಯುವಂತೆ ಮಾಡಿತು. ದೇಶದ ಈ ದುರ್ದೆಶೆ ಅಲೆಗ್ಝಾಂಡರನ ಕಾಲದಿಂದಲೂ ಒದಗಿದೆ. ಅವನು ಭಾರತಕ್ಕೆ ಬರಲು ಹಿಂದೂ ರಾಜನೇ ಕಾರಣನು. ಇಂಥ ಉದಾಹರಣೆಗಳು ಅನೇಕವಿವೆ.

ಇಂತು ಪಂ. ತಾರಾನಾಥರು ಕನ್ನಡ ನಾಡಿನಲ್ಲಿ ವೈಚಾರಿಕ ಕ್ರಾಂತಿಯನ್ನೇ ಮಾಡಿದ್ದಾರೆ. 'ಧರ್ಮ ಸಂಭವ' ಪ್ರವಿಚಾರ ಪ್ರಚೋದಕ ಗ್ರಂಥವೆಂದು ಖ್ಯಾತಿಯನ್ನು ಗಳಿಸಿದೆ. ಈ ಗ್ರಂಥವನ್ನು ಕುರಿತು ಕಾಶೀ ವಿದ್ಯಾಪೀಠದ ಮಹಾಮಹೋಪಾಧ್ಯಾಯ ಶ್ರೀ ಭಟಜಿಯವರು;

"ನಿಜ ಪಂಡಿತರಿಗೆ ಈ ಪುಸ್ತಕವು ಅಪೂರ್ವ ಪಾಂಡಿತ್ಯದ ಹಬ್ಬವೇ ಆಗಿ ತೋರದಿರದು"

ಪ್ರೇಮಾಯತನಾಶ್ರಮದಿಂದ ಪಂ. ತಾರಾನಾಥರಿಂದ ಹೊರಡುತ್ತಿದ್ದ "ಪ್ರೇಮ" ಎಂಬ ಮಾಸಪತ್ರಿಕೆಯ ೨, ೩, ೪, ೫ ನೆಯ ಸಂಪುಟಗಳಲ್ಲಿ "ದಾಂಪತ್ಯದರ್ಶನವು" ಪ್ರಕಟವಾಗುತ್ತಿತ್ತು. ಪಂ. ತಾರಾನಾಥರ ಪತ್ರಗಳು "ಪ್ರಿಯ ದಂಪತಿಗಳೇ" ಎಂಬ ಸಂಬೋಧನೆಯಿಂದ ಪ್ರಾರಂಭವಾಗುತ್ತಿದ್ದವು. "ದಾಂಪತ್ಯದರ್ಶನ"ದಲ್ಲಿ ಅಂಥ ೨೬ ಪತ್ರಗಳಿವೆ. ಪಂ. ತಾರಾನಾಥರು ಬ್ರಹ್ಮಚರ್ಯ ವ್ರತವನ್ನು ಪಾಲಿಸುವಾಗ ಬ್ರಹ್ಮಚರ್ಯದ ಮಹತಿಯನ್ನು ತಿಳಿಸಿ

ಹೇಳಿದರು. ಅವರು ಮದುವೆಯಾದ ಮೇಲೆ ದಾಂಪತ್ಯದ ಮಹತ್ವವನ್ನೂ ಪತ್ನಿಯರ ಪ್ರೇಮ ಸಂಭೋಗವನ್ನು ವರ್ಣಿಸಿದ್ದಾರೆ. ಈ "ದಾಂಪತ್ಯದರ್ಶನ"ವನ್ನು ಓದಿದ ಮೇಲೆ ಅವರ ಟೀಕಾಕಾರರು ಪಂ. ತಾರಾನಾಥರ ನಡೆ ನುಡಿಯಲ್ಲಿ ಹೊಂದಾಣಿಕೆಯಿರಲಿಲ್ಲ ಎಂದು ಟೀಕಿಸಿದ್ದುಂಟು.

ಪಂಡಿತ ತಾರಾನಾಥರು ಅನೇಕ ನಾಟಕಗಳನ್ನು ಬರೆದಿದ್ದಾರೆ. "ದೀನಬಂಧು ಕಬೀರ" ನಾಟಕವನ್ನು ಹಿಂದೀ ಭಾಷೆಯಲ್ಲಿ ಬರೆದಿದ್ದು ಅದನ್ನು ಕೇವಲ ೫ ತಾಸುಗಳಲ್ಲಿ ಬರೆದಿದ್ದಾರೆ ದೇವರು ಒಬ್ಬನೇ ಇದ್ದರೂ ಆತನನ್ನು ಕೆಲವರು ರಾಮನೆಂದೂ ಕೆಲವರು ರಹೀಮನೆಂದೂ ಇನ್ನಿತರ ಹೆಸರುಗಳಿಂದಲೂ ಕರೆಯುತ್ತಾರೆಂಬುದೇ ಆ ನಾಟಕದ ಸಾರಸತ್ವ. ಮ. ಗಾಂಧಿಯವರು "ಕಬೀರ" ನಾಟಕವನ್ನು ನೋಡಿ ಈ ರೀತಿ ಹೇಳಿದ್ದಾರೆ;

"ಇದು ನನಗೆ ತ್ರಿವಿಧವಾದ ಆನಂದವನ್ನು ಕೊಟ್ಟಿದೆ. ಇದರ ಹಿಂದಿ ಶೈಲಿ ಅತ್ಯುಚ್ಚ, ಅತಿ ಸುಂದರ ತರಗತಿಯದಾಗಿದೆ. ಆಡಿದ ರೀತಿಯೂ ಬಹಳ ಉತ್ತಮವಾಗಿದೆ. ನಾಟಕಗಳಲ್ಲಿ ಸಹ ಖಾದಿಯನ್ನು ಹೇಗೆ ಉಪಯೋಗಿಸಬಹುದು ಎಂಬುವನ್ನೂ ಪಂಡಿತಜಿಯವರು ತೋರಿಸಿಕೊಟ್ಟರು." ಪಂ. ತಾರಾನಾಥರೇ ನಾಟಕಗಳ ಬಗ್ಗೆ ಹೀಗೆ ಹೇಳಿದ್ದಾರೆ:

ನಾಟಕಗಳು "ಸಮಾಜದ ಸದಾಚಾರ, ಸುವಿಚಾರ, ದುರಾಚಾರ, ಅತ್ಯಾಚಾರಗಳನ್ನು ಪ್ರೇಕ್ಷಕರಿಗೆ ಸ್ಪಷ್ಟವಾಗಿ ತೋರಿಸಿ ಸನ್ಮಾರ್ಗವನ್ನು ಪಾತ್ರಗಳ ಸುಖದುಃಖಗಳ ಮೂಲಕವಾಗಿ ಸೂಚಿಸಬೇಕು. ನಾಟಕವು ನೋಡುವವರ ಕೈಗನ್ನಡಿಯಾಗಿರಬೇಕೇ ಹೊರತು ಹಟವಾದಿಗಳ ನೆಲಮನೆಯಾಗಿರಬಾರದು."

ಇವಲ್ಲದೆ ಪಂ. ತಾರಾನಾಥರು "ಮೋಹನ ಶಾಸ್ತ್ರ" ಎಂಬ ನಾಟಕ, "ಹಬ್ಬಗಳು" ಸುಲಭ ಚಿಕಿತ್ಸೆ, ಹಾಗೂ ಪ್ರಸಿದ್ಧ ರಸೌಷಧಿಗಳು ಎಂಬ ಲೇಖನಗಳನ್ನು ಸ್ವಾರಸ್ಯಕರವಾಗಿ ಬರೆದಿದ್ದಾರೆ.

ಇಂತು ಪಂ. ತಾರಾನಾಥರು ಹೈದರಾಬಾದ ಕರ್ನಾಟಕದ ಸಮಾಜಸೇವೆ, ಶಿಕ್ಷಣ, ಆರೋಗ್ಯ ನಿಯತಕಾಲಿಕ, ರಾಷ್ಟ್ರೀಯತೆ ಇತ್ಯಾದಿ ರಂಗಗಳಲ್ಲಿ ಅಮೋಘವಾದ ಜನಜಾಗೃತಿಗೆಯ್ದು ಜನನಾಯಕರಾಗಿದ್ದರು. ಭಾರತವು ಸ್ವಾತಂತ್ರ್ಯವನ್ನು ಸಂಪಾದಿಸಿ ೩೮ ವರ್ಷಗಳಾಗಿರುವ ಈ ಶುಭ ಸಂದರ್ಭದಲ್ಲಿ ಪಂ. ತಾರಾನಾಥರನ್ನೂ ಅವರ ಸೇವೆಯನ್ನೂ ಸ್ಮರಿಸಿಕೊಂಡು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುವದು ನಾಡಿಗರ—ಅದರಲ್ಲೂ ಹೆಚ್ಚಾಗಿ ಹೈದರಾಬಾದ ಕರ್ನಾಟಕದವರ ಪವಿತ್ರ ಕರ್ತವ್ಯವಾಗಿದೆ.

ಉಪಸಂಹಾರ

ಇಂತು ಈ ಶತಮಾನದ ಪ್ರಥಮ ಪಾದದ ಶೀರ ನಿಕೃಷ್ಟಾವಸ್ಥೆಯಲ್ಲಿದ್ದ ಹೈದರಾಬಾದ ಕರ್ನಾಟಕದ ಶಿಕ್ಷಣ, ಸಾಹಿತ್ಯ, ಕಲೆ, ಲಲಿತ (ಗಾಯನ, ನೃತ್ಯ), ನಿಯತಕಾಲಿಕ ವಿಜ್ಞಾನ (ಶರೀರ ಶಾಸ್ತ್ರ, ವ್ಯಾಯಾಮ, ಆಯುರ್ವೇದ), ರಾಜಕೀಯ ರಂಗಗಳಲ್ಲಿ ಜನಜಾಗೃತಿಗೆಯ್ದು, ಅಮೋಘವಾದ ಸುಧಾರಣೆಯನ್ನುಂಟುಮಾಡಿ, ರಕ್ತರಹಿತ ಕ್ರಾಂತಿಯನ್ನೆಸಗಿದ ಪಂ. ತಾರಾನಾಥರು ಪ್ರಾತಃಸ್ಮರಣೀಯರು. ಅಂತಹರ ಆದರ್ಶ ಮುಂದಿನ ಪೀಳಿಗೆಗೆ ಆಗುವ ಕುರಿತು ಅವರ ಚಿರಂತನ ಸ್ಮಾರಕವೊಂದರ ಏರ್ಪಾಟಾಗುವದು ಅವಶ್ಯವಿದೆ.

ಗ್ರಂಥಋಣ

೧. ಪಂಡಿತ ತಾರಾನಾಥ –ಧರ್ಮಸಂಭವ ಅಥ
ಧರ್ಮದ ಮೂಲ ತತ್ವ

೨ ಪಂಡಿತ ತಾರಾನಾಥ - ತಾಯಂದಿರಿಗೆ ಪತ್ರಗ

೩. ಪಂಡಿತ ತಾರಾನಾಥ –ದಾಂಪತ್ಯ ದರ್ಶನ

೪. ಪಂಡಿತ ತಾರಾನಾಥ –ಪ್ರಸಿದ್ಧ ರಸೌಷಧಿಗ
ಅವುಗಳ ಪ್ರಯೋಗ,
ಉಪಯೋಗಗಳು

೫. ಪಂ. ಮೂ. ರುದ್ರಮುನಿಸ್ವಾಮಿ –ಪಂಡಿತ ತಾರಾ

೬. ದಿ ಫ್ರೀಡಮ್ ಸ್ಟ್ರಗಲ್ ಇನ್ ಹೈದರಾ
vol. III, ೧೮೮೫–೧೯೨೦

೭. ಪ್ರೊ. ಜಿ. ಎಸ್. ಹಾಲಪ್ಪ(ಸಂ.)–ದಿ ಫ್ರೀಡಮ್
ಮೂವ್ಹಮೆಂಟ
ಕರ್ನಾಟಕ vol.

ಸಂದರ್ಶನ

೧. ಪ್ರೊ. ವ್ಹಿ. ಜಿ. ಕುಲಕರ್ಣಿ.

೨. ಅ. ನ. ಹುರಕಡ್ಲಿ ಗುರುಗಳು, ನವಲಗುಂದ.

ಉಪನ್ಯಾಸ ಗ್ರಂಥಮಾಲೆಯ

ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಹರಿಶ್ಚಂದ್ರ ಕಾವ್ಯದಲ್ಲಿಯ
ರಸಸ್ಥಾನಗಳು —ಸಿ. ಎಲ್. ಹೆರಕಲ್ಲ

೨. ಕಾರವಾರ ಜಿಲ್ಲೆಯ ಶಾಸನಗಳು —ಆರ್. ಎನ್. ಗುರವ

೩. ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ —ವೀರಣ್ಣ ರಾಜೂರ

೪. ಮಾನಸಿಕ ರೋಗಗಳು —ಎಂ. ಬಿ. ರೇಣುಕಾರ್ಯ

೫. ಕನ್ನಡದಲ್ಲಿ ಕಾದಂಬರಿ ಸಾಹಿತ್ಯ —ದು. ನಿಂ. ಬೆಳಗಲಿ

೬. ಗರತಿಯರ ಹಾಡುಗಳಲ್ಲಿ ಕೌಟುಂಬಿಕ
ಜೀವನ ಚಿತ್ರಣ —ದೇವೇಂದ್ರಕುಮಾರ

೭. ಮಾನವ ಮತ್ತು ಶಾಖಾಹಾರ —ಎ. ಎಸ್. ಧರಣೇ ಹಕಾರಿ

೮. ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ ಂದ್ರಯ್ಯ
—ಎನ್. ಎ.

೯. ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ ಪಾಟೀಲ
—ಲೀಲಾವತಿ ತೋರ

೧೦. ಪ್ರೇಮಚಂದರ ಸಣ್ಣ ಕತೆಗಳು —ಬಿ. ಎಫ್. ಹಣಗಿ
ಸರಾ

ವ್ಯಾಸಂಗವಿಸ್ತರಣ ಮತ್ತು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೫೮೦೦೦೩